# 1:1, 2

# ವಂದನೆಗಳು

## ಪೌಲ ಮತ್ತು ತಿಮೊಥೆಯಿಂದ (1:1)

**[1]ದೇವರ ಚಿತ್ತಾನುಸಾರವಾಗಿ ಕ್ರಿಸ್ತ ಯೇಸುವಿನ ಅಪೊಸ್ತಲನಾದ ಪೌಲನೂ ಸಹೋದರನಾದ ತಿಮೊಥೆಯನೂ.**

### "... ಪೌಲನೂ"

**ಪೌಲನು** ಕೊಲೊಸ್ಸೆಯವರಿಗೆ ಬರೆದ ತನ್ನ ಪತ್ರಿಕೆಯನ್ನು ಅಪೊಸ್ತಲಿಕ ಅಧಿಕಾರ ಹೊಂದಿರುವ ಲೇಖಕನು ಎಂಬದಾಗಿ ತನ್ನನ್ನು ಗುರುತಿಸಿಕೊಳ್ಳುವ ಮೂಲಕ ಪರಿಚಯಿಸುತ್ತಾನೆ. ಆತನು ತಿಮೊಥೆಯನನ್ನು ಸಹಪಾಠಿ ಮತ್ತು ಕ್ರಿಸ್ತನಲ್ಲಿ ಸಹೋದರನು ಎಂದು ಕರೆಯುತ್ತಾನೆ. ಇದಾದ ಬಳಿಕ, ಆತನು ಕೊಲೊಸ್ಸೆಯಲ್ಲಿರುವ ಕ್ರಿಸ್ತನಲ್ಲಿನ ತನ್ನ ಸಹೋದರರನ್ನು ಸಂಬೋಧಿಸಿ ಬರೆಯುವದಕ್ಕೆ ಮತ್ತು ದೇವರಿಂದ ಅವರಿಗೆ ಆಶೀರ್ವಾದಗಳನ್ನು ಹಾರೈಸುವದಕ್ಕೆ ಮುನ್ನಡೆಯುತ್ತಾನೆ.

ಪೌಲನ ಹದಿಮೂರು ಪತ್ರಿಕೆಗಳು ಆತನ ಹೆಸರಿನಿಂದ ಆರಂಭಗೊಳ್ಳುತ್ತವೆ. ಈ ಪತ್ರಿಕೆಯನ್ನು "ಪೌಲನೂ" ಎಂದು ಆರಂಭಿಸುವ ಮೂಲಕ, ಆತನು ಆತನ ದಿನಗಳಲ್ಲಿ ವಾಡಿಕೆಯಲ್ಲಿದ್ದ ವಂದನೆ ಹೇಳುವ ರೀತಿಯನ್ನು ಅನುಸರಿಸಿದನು. ಆತನು ಎಂದಿನಂತೆ ತನ್ನ ಹೆಸರನ್ನು ಮತ್ತು ತನ್ನ ಸಂಗಡ ಇರುತ್ತಿದ್ದ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರನ್ನು ಅಥವಾ ಹೆಸರುಗಳನ್ನು ಸೇರ್ಪಡೆಗೊಳಿಸುತ್ತಿದ್ದನು, ನಂತರ ಪತ್ರಿಕೆಯನ್ನು ಸ್ವೀಕರಿಸುವವರನ್ನು ಹೆಸರಿಸಿ ವಂದನೆಗಳನ್ನು ಹೇಳುತ್ತಿದ್ದನು.

ಅಪೊಸ್ತಲರ ಕೃತ್ಯಗಳು ಪುಸ್ತಕವು ಅಪೊಸ್ತಲನನ್ನು ಎರಡು ಹೆಸರುಗಳಿಂದ ಕರೆಯುತ್ತದೆ, "ಸೌಲ" ಮತ್ತು "ಪೌಲ" (ಅಪೊಸ್ತಲರ ಕೃತ್ಯಗಳು 13:9). ಆತನು ಯೆಹೂದ್ಯರೊಳಗೆ ಇರುವ ವೇಳೆ, ಆತನು ತನ್ನ ಇಬ್ರಿಯ ಹೆಸರಾದ "ಸೌಲ" (שָׁאוּל, *sha'ul,* "ದೇವರಿಂದ ಕೇಳಲ್ಪಟ್ಟವನು" ಎಂದರ್ಥ) ಎಂದು ಪರಿಚಿತನಿದ್ದನೆಂದು ತೋರುತ್ತದೆ. ಅದಕ್ಕೆ ಸಮನಾದ ಗ್ರೀಕ್ ಪದವೆಂದರೆ Σαῦλος (*Saulos*). ಪೌಲನು ಅನ್ಯಜನಾಂಗದ ಜಗತ್ತಿನಲ್ಲಿ ಸುವಾರ್ತೆ ಸಾರುವದಕ್ಕೆ ಆರಂಭಿಸಿದಾಗ, ಲೂಕನು ಆತನ ಗ್ರೀಕ್ ಹೆಸರನ್ನು – Παῦλος (*Paulos*), ಅಥವಾ ಪೌಲ ಎಂದು ಬಳಸಲಾರಂಭಿಸಿದನು, ಅದರರ್ಥವು "ಸ್ವಲ್ಪ" ಅಥವಾ "ಚಿಕ್ಕ" ಎಂಬದು. ಆತನು ತನ್ನ ಪತ್ರಿಕೆಗಳಲ್ಲಿ, ತನ್ನನ್ನು "ಪೌಲನು" ಎಂದು ಕರೆದುಕೊಂಡನು (ಉದಾಹರಣೆಗೆ, ರೋಮಾ 1:1; 1 ಕೊರಿಂಥ 1:1).

ಪೇತ್ರನು ಆತನನ್ನು 2 ಪೇತ್ರ 3:15ರಲ್ಲಿ, "ಪೌಲ" ಎಂದು ಕರೆಯುತ್ತಾನೆ, ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರ ಕೃತ್ಯಗಳು ಮತ್ತು ಪೌಲನ ಪತ್ರಿಕೆಗಳನ್ನು ಹೊರತು ಪಡಿಸಿ ಬೇರೆ ಕಡೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದು ಇದೊಂದೆ ಸಾರಿ ಆಗಿದೆ.

ದಮಸ್ಕದ ದಾರಿಯಲ್ಲಿ ತನಗಾದ ಅನುಭವವನ್ನು ಜ್ಞಾಪಿಸಿಕೊಂಡು ಹೇಳುವಾಗ (ಅಪೊಸ್ತಲರ ಕೃತ್ಯಗಳು 22:7; 26:14), ಪೌಲನು "ಸೌಲನೇ, ಸೌಲನೇ . . ." ಎಂದು ಕರೆದ ಯೇಸುವಿನ ಹೇಳಿಕೆಯನ್ನು ಪುನರಾವರ್ತಿಸುತ್ತಾನೆ. ಬೇರೆ ಎಲ್ಲಾ ಸಂದರ್ಭಗಳಲ್ಲಿ ಆತನು ತನ್ನನ್ನು "ಪೌಲ" ಎಂದು ಕರೆದುಕೊಂಡನು. ಆತನು ತನ್ನ ಪತ್ರಿಕೆಗಳಲ್ಲಿ "ಸೌಲ" ಎಂಬ ಹೆಸರನ್ನು ಎಂದಿಗೂ ಬಳಸಲಿಲ್ಲ – ಬಹುಶಃ ಅವುಗಳು ಅನ್ಯಜನಾಂಗದ ಜಗತ್ತಿಗೆ ಅಥವಾ ತಿಮೊಥೆ, ತೀತನು, ಮತ್ತು ಫಿಲೆಮೋನರಂತಹ ಅನ್ಯಜನಾಂಗದ ಹಿನ್ನಲೆಯುಳ್ಳ ವ್ಯಕ್ತಿಗಳಿಗೆ ಬರೆದವುಗಳಾಗಿದ್ದವೆಂಬ ಕಾರಣಕ್ಕಾಗಿ ಇರಬಹುದು.

ಆತನು ಕ್ರೈಸ್ತನಾದ ವೇಳೆಯಲ್ಲಿ ಆತನು ಹೆಸರು "ಸೌಲ"ನಿಂದ "ಪೌಲ" ಆಗಿ ಮಾರ್ಪಟ್ಟಿತು ಎಂದು ವಾದಿಸುತ್ತಾರೆ. ಇದು ಸತ್ಯವಾಗಿರಲಾರದು. ಆತನು ಪರಿವರ್ತನೆಗೊಂಡು ಸುಮಾರು ಹನ್ನೆರಡು ವರ್ಷಗಳಾಗುವ ತನಕ ಲೂಕನು ಆತನನ್ನು "ಸೌಲ" ಎಂದೇ ಕರೆಯುವದನ್ನು ಮುಂದುವರೆಸಿದನು (ಅಪೊಸ್ತಲರ ಕೃತ್ಯಗಳು 7:58; 8:1-3; 9:1-22; 11:25-30; 13:1, 2). ಆತನನ್ನು ಮೊದಲ ಬಾರಿಗೆ "ಪೌಲ" ಎಂಬದಾಗಿ ಮೊದಲನೆಯ ಸುವಾರ್ತಾ ಪ್ರಯಾಣದ ವೇಳೆ ಕುಪ್ರ ದ್ವೀಪದ ಪಾಫೋಸ್ ಎಂಬ ಊರಲ್ಲಿ ಎಲುಮನನ್ನು ಗದರಿಸುವ ಘಟನೆಯನ್ನು ವಿವರಿಸುವಾಗ ಕರೆಯಲ್ಪಡುತ್ತದೆ. ಲೂಕನು "ಪೌಲನೆನಿಸಿಕೊಳ್ಳುವ ಸೌಲನು" ಎಂದು ಬರೆದನು (ಅಪೊಸ್ತಲರ ಕೃತ್ಯಗಳು 13:9). ಆತನ ಹೆಸರು "ಸೌಲ" ಎಂಬದರಿಂದ "ಪೌಲ" ಎಂದು ಬದಲಾಯಿತೆಂದು ಲೂಕನು ಬರೆಯಲಿಲ್ಲ. ಅಪೊಸ್ತಲನು ಬಹುಶಃ, ಶಿಶುವಾಗಿರುವಾಗಿನಿಂದಲೇ, ಸೌಲ (*Saoul*, *Saulos*) ಮತ್ತು ಪೌಲ ಎಂಬ ಎರಡೂ ಹೆಸರುಗಳನ್ನು ಹೊಂದಿದ್ದನು.[1] ಇದು ವಾಡಿಕೆಯಲ್ಲಿದ್ದೇನಾಗಿರಲಿಲ್ಲ, ಯಾಕೆಂದರೆ ಒಂದು ಇಬ್ರಿಯ ಹೆಸರು ಮತ್ತು ಒಂದು ಗ್ರೀಕ್ ಹೆಸರನ್ನು ಇಟ್ಟುಕೊಳ್ಳುವದು ಸರ್ವಸಾಧಾರಣವಾಗಿತ್ತು.

ಬೇರೆ ಯಾವದೇ ಅಪೊಸ್ತಲನಿಗಿಂತಲೂ ಪೌಲನ ಬಗ್ಗೆ ಅಧಿಕವಾದ ಮಾಹಿತಿಯು ತಿಳಿದಿರುತ್ತದೆ – ಅಪೊಸ್ತಲರ ಕೃತ್ಯಗಳು ಪುಸ್ತಕದಿಂದ ಮಾತ್ರವಲ್ಲದೆ (13ರಿಂದ 28 ಅಧ್ಯಾಯಗಳು), ಆತನ ಪತ್ರಿಕೆಗಳಿಂದ ಸಹ ಆಗಿರುತ್ತದೆ. ದಮಸ್ಕದಲ್ಲಿ ಆತನು ಪರಿವರ್ತನೆಗೊಂಡ ಬಳಿಕ, ಆತನು ತಕ್ಷಣದಲ್ಲೇ ದಮಸ್ಕದಲ್ಲಿ ಮತ್ತು ನಂತರ ಯೆರುಸಲೇಮಿನಲ್ಲಿ ಕ್ರಿಸ್ತನ ಕುರಿತು ಸಾರಿದನು (ಅಪೊಸ್ತಲರ ಕೃತ್ಯಗಳು 9:19-22, 26-28). ಯೆಹೂದ್ಯರು ಆತನ ಪ್ರಾಣಕ್ಕೆ ಬೆದರಿಕೆಯನ್ನು ಒಡ್ಡಿದ್ದರಿಂದ, ಆತನನ್ನು ತಾರ್ಸಕ್ಕೆ ಕಳುಹಿಸಲಾಯಿತು (ಅಪೊಸ್ತಲರ ಕೃತ್ಯಗಳು 9:29, 30). ಬಾರ್ನಬನು ಆತನನ್ನು ತಾರ್ಸದಿಂದ ಅಂತಿಯೋಕ್ಯಕ್ಕೆ ಕರೆತರುವ ತನಕ ಆತನು ಹೆಚ್ಚುಕಡಿಮೆ ಅಪರಿಚಿತನಾಗಿ ಉಳಿದನು (ಅಪೊಸ್ತಲರ ಕೃತ್ಯಗಳು 11:22-26; ನೋಡಿರಿ ಗಲಾತ್ಯ 1:22). ಇದಾದ ಬಳಿಕ, ಆತನು ಮೂರು ಸುವಾರ್ತಾ ಪ್ರಯಾಣಗಳನ್ನು ಮಾಡಿದನು (ಅಪೊಸ್ತಲರ ಕೃತ್ಯಗಳು 13:1-21:15).

ಆತನ ಮೂರನೆಯ ಸುವಾರ್ತಾ ಪ್ರಯಾಣದ ಅಂತ್ಯದ ವೇಳೆಯಲ್ಲಿ, ಪೌಲನು

ಯೆರೂಸಲೇಮಿನಲ್ಲಿ ಬಂಧಿಸಲ್ಪಟ್ಟನು. ಯೆಹೂದ್ಯರು ಆತನನ್ನು ಕೊಲ್ಲಬೇಕೆಂದು ಕಾಯುತ್ತಿದ್ದರು, ಆದರೆ ರೋಮನ್ ಸೇನಾಧಿಪತಿಯು ಆತನನ್ನು ಕಾಪಾಡಿದನು (ಅಪೊಸ್ತಲರ ಕೃತ್ಯಗಳು 21:26-39). ಅಲ್ಲಿಂದ ಆತನನ್ನು ಕೈಸರೈಯಕ್ಕೆ ಸ್ಥಳಾಂತರಿಸಲಾಯಿತು ಮತ್ತು ಆತನು ಫೇಲಿಕ್ಸನಿಂದ, ನಂತರ ಫೆಸ್ತನಿಂದ ಮತ್ತು ಅಗ್ರಿಪ್ಪನಿಂದ ನ್ಯಾಯವಿಚಾರಣೆ ಮಾಡಲ್ಪಟ್ಟನು (ಅಪೊಸ್ತಲರ ಕೃತ್ಯಗಳು 23-27). ಒಬ್ಬ ರೋಮನ್ ನಾಗರಿಕನಾಗಿ, ಆತನು ರೋಮಾಪುರದಲ್ಲಿ ಕೈಸರನಿಂದ ನ್ಯಾಯವಿಚಾರಣೆ ಮಾಡಲ್ಪಡುವದಕ್ಕೆ ಮನವಿಯನ್ನು ಸಲ್ಲಿಸಿದನು, ಅಲ್ಲಿ ಆತನು ಸ್ವತಃ ತೆಗೆದುಕೊಂಡ ಬಾಡಿಗೆ ಮನೆಯಲ್ಲಿ ಎರಡು ವರ್ಷಗಳ ಕಾಲ ಇದ್ದು ಸುವಾರ್ತೆಯನ್ನು ಸಾರಿದನು (ಅಪೊಸ್ತಲರ ಕೃತ್ಯಗಳು 28:30).

ಆತನ ಜೀವನದಲ್ಲಿ ನಂತರದಲ್ಲಾದ ಘಟನೆಗಳ ಬಗ್ಗೆ ಆತನು ತಿಮೊಥೆ ಮತ್ತು ತೀತನಿಗೆ ಬರೆದ ಪತ್ರಿಕೆಗಳಿಂದ ಹಾಗೂ ಪ್ರೇರಿತವಲ್ಲದ ಬರಹಗಳಿಂದ ಊಹಿಸಿಕೊಳ್ಳಬಹುದಾಗಿದೆ:

> ಬಹು ಸಂಭಾವ್ಯವಾಗಿ ಪೌಲನು ಕ್ರಿ.ಶ. 63ರಲ್ಲಿ ಬಿಡುಗಡೆಗೊಳಿಸಲ್ಪಟ್ಟನು ಮತ್ತು ಆತನು ಪುನಃ ಬಂಧನಕ್ಕೊಳಗಾಗಿ ನಿರೋ ಚಕ್ರವರ್ತಿಯ ಕೈಯಲ್ಲಿ ಮರಣವನ್ನು ಅನುಭವಿಸುವ ಮುನ್ನ ಸ್ಪೇನ್ ದೇಶಕ್ಕೆ ಮತ್ತು ಅಯಗಿಯನ್ ಪ್ರಾಂತ್ಯಕ್ಕೆ ಭೇಟಿ ಕೊಟ್ಟನು (c. ಕ್ರಿ.ಶ. 67). *1 Clement* (5.5-7; ? ಕ್ರಿ.ಶ. 95), Muratorian Canon (c. ಕ್ರಿ.ಶ. 170), apocryphal (Vercelli) *Acts of Peter* (1.3; c. ಕ್ರಿ.ಶ. 200) ಇವುಗಳು ಸ್ಪೇನ್ ದೇಶಕ್ಕೆ ಪ್ರಯಾಣಿಸಿದ್ದಕ್ಕೆ ಸಾಕ್ಷಿ ನೀಡುತ್ತವೆ; ಮತ್ತು ಸಭಾಪಾಲನಾ ಪತ್ರಿಕೆಗಳು ಪೂರ್ವದಿಕ್ಕಿನ ಭಾಗಗಳಲ್ಲಿ ಮಾಡಿದ ಸೇವೆಯನ್ನೊಳಗೊಂಡಂತೆ ಕಾಣುತ್ತವೆ.[2]

ಬಹುಶಃ, ನ್ಯಾಯವಿಚಾರಿಸಲ್ಪಟ್ಟು ಬಿಡುಗಡೆಗೊಳಿಸಲ್ಪಟ್ಟ ಮೇಲೆ, ಆತನು ಸುವಾರ್ತಾ ಸೇವೆಗಾಗಿ ಸ್ಪೇನ್ ದೇಶಕ್ಕೆ ಹೋಗುವವನಾಗಿ (ರೋಮಾ 15:24) ಮಕೆದೋನ್ಯವನ್ನು ಹಾದು ಹೋಗುವ ವೇಳೆ ತಿಮೊಥೆಯನನ್ನು ಎಫೆಸದಲ್ಲಿ ಬಿಟ್ಟು ಸಾಗುತ್ತಾನೆ (1 ತಿಮೊಥೆ 1:3). ಈ ಪ್ರಯಾಣದ ವೇಳೆಯಲ್ಲಿ, ಆತನು ಕ್ರೇತ ದ್ವೀಪವನ್ನು ದಾಟಿ ಹೋದನು, ಅಲ್ಲಿ ಆತನು ಅಲ್ಲಿನ ಕೆಲಸವನ್ನು ಪೂರ್ತಿಗೊಳಿಸುವಂತೆ ತೀತನನ್ನು ಬಿಟ್ಟು ಹೋದನು (ತೀತನಿಗೆ 1:5). ಬಳಿಕ ಆತನು ಚಳಿಗಾಲವನ್ನು ನಿಕೊಪೊಲಿಯಲ್ಲಿ ಕಳೆಯುವದಕ್ಕೆ ಯೋಜನೆ ಮಾಡಿದನು (ತೀತನಿಗೆ 3:12).[3] ಆತನು ಸ್ಪೇನ್ ದೇಶದಿಂದ ಹಿಂದಿರುಗಿ ಬಂದಾಗ, ಆತನು ಬಹುಶಃ ರೋಮಾಪುರದಲ್ಲಿ ಪುನಃ ಸೆರೆಮನೆಗೆ ಹಾಕಲ್ಪಟ್ಟನು (2 ತಿಮೊಥೆ 1:16, 17; 2:9).[4] ಆತನ ಎರಡನೆಯ ಬಾರಿಯ ನ್ಯಾಯವಿಚಾರಣೆಯಲ್ಲಿ ಮೊದಲ ಸಾರಿ ಕಾಣಿಸಿಕೊಳ್ಳುವ ವೇಳೆ, ಆತನು ಅಪರಾಧಿಯೆಂದು ಸಾಭಿತಾಗದಿದ್ದಾಗ್ಯೂ ಬಂಧನದಲ್ಲಿಡಲ್ಪಟ್ಟಿರಬಹುದಾಗಿದೆ (2 ತಿಮೊಥೆ 4:16-18). ಹೇಗೂ, ಆತನಿಗೆ ಬಿಡುಗಡೆಗೊಳಿಸಲ್ಪಡುತ್ತೇನೆಂಬ ಯಾವ ನಿರೀಕ್ಷೆಯೂ ಇರಲಿಲ್ಲ; ತನ್ನ ಅಂತ್ಯವು ಸಮೀಪವಾಗಿದೆಯೆಂದು ಆತನು ಪರಿಗಣಿಸಿಕೊಂಡಿದ್ದನು (2 ತಿಮೊಥೆ 4:6-8). ಸಂಪ್ರದಾಯ ಹೇಳುವ ಪ್ರಕಾರ ಪೌಲನು ರೋಮಿನ ಪ್ರಾಚೀನ ನಗರದ ಬಳಿಯಲ್ಲಿರುವ ರಸ್ತೆಯಾದ ಒಸ್ಟಿಯನ್ ದಾರಿಯಲ್ಲಿ ಶಿರಚ್ಛೇದ ಮಾಡಲ್ಪಟ್ಟನು. ರೋಮನ್ ನಾಗರಿಕನಾಗಿ ಮರಣ ದಂಡನೆ ವಿಧಿಸಲ್ಪಟ್ಟಿದ್ದರೆ, ಸಂಪ್ರದಾಯ ಹೇಳುವ ಪ್ರಕಾರ ಪೇತ್ರನು ಕೊಲ್ಲಲ್ಪಟ್ಟಂತೆ, ಶಿಲುಬೆಗೆ ಹಾಕಲ್ಪಡುತ್ತಿರಲಿಲ್ಲ,

ಆದರೆ ಕತ್ತಿಯಿಂದ ಶಿರಚ್ಛೇದ ಮಾಡಲ್ಪಟ್ಟಿರುತ್ತಿದ್ದನು.

ಆತನ ಹದಿಮೂರು ಪತ್ರಿಕೆಗಳ ಪ್ರಭಾವವನ್ನು ಅತಿಯಾಗಿ ಅಂದಾಜಿಸಲಿಕ್ಕಾಗದು. ಈ ಪತ್ರಿಕೆಗಳು ಆದಿ ಸಭೆಯಿಂದ ಓದಲ್ಪಟ್ಟಿರುವದು ಮಾತ್ರವಲ್ಲದೆ, ಅದಾದ ನಂತರದ ಎಲ್ಲಾ ಪೀಳಿಗೆಗಳಿಂದ ಪರಾಮರ್ಶೆ ಮಾಡಲ್ಪಟ್ಟಿವೆ ಮತ್ತು ಅಧ್ಯಯನ ಮಾಡಲ್ಪಟ್ಟಿರುತ್ತವೆ. ಈ ಪತ್ರಿಕೆಗಳಲ್ಲಿ ಕೆಲವೊಂದು ಅತ್ಯಂಥ ಶ್ರೇಷ್ಠವಾದ ಕ್ರೈಸ್ತ ವಿಚಾರಗಳು ಮತ್ತು ಸಿದ್ಧಾಂತಗಳ ತಳಹದಿಯು ಕಂಡು ಬರುತ್ತದೆ. ಬಹುಶಃ ಆತನು ಸೆರೆಮನೆಯಿಂದ ಬರೆದ ಪತ್ರಿಕೆಗಳು ಆತನ ಸುವಾರ್ತಾ ಪ್ರಯಾಣಗಳಿಗಿಂತಲೂ ಅಧಿಕವಾದ ಪ್ರಭಾವವನ್ನು ಕ್ರೈಸ್ತತ್ವದ ಮೇಲೆ ಬೀರಿರುತ್ತವೆ.

## ". . . ಅಪೊಸ್ತಲನಾದ"

**ಅಪೊಸ್ತಲನಾದ** ಎಂಬ ಪದಗುಚ್ಛವನ್ನು ಸೇರ್ಪಡೆಗೊಳಿಸಿದ್ದು ಮೂರು ಉದ್ದೇಶಗಳನ್ನು ನೆರವೇರಿಸಿದ್ದಿರಬಹುದಾಗಿದೆ: ಗುರುತು ಹಿಡಿಯುವದು, ಪೌಲ ಎಂಬುದು ಒಂದು ಸರ್ವಸಾಧಾರಣ ಹೆಸರಾಗಿತ್ತಾದ್ದರಿಂದ ಇದು ಅಗತ್ಯವಾಗಿತ್ತು; ಒಬ್ಬ ಅಪೊಸ್ತಲನಾಗಿ ತನಗಿರುವ ಅಧಿಕಾರವನ್ನು ಪ್ರಮಾಣೀಕರಿಸುವದು; ಮತ್ತು ಕೊಲೊಸ್ಸೆಯವರು ಆತನನ್ನು ಬಲ್ಲವರಾಗಿದ್ದರಾದ್ದರಿಂದ ವೈಯಕ್ತಿಕವಾಗಿ ಉಲ್ಲೇಖಿಸಿಕೊಳ್ಳುವಿಕೆ. ಪತ್ರಿಕೆಯು ಒಬ್ಬ ಅಪೊಸ್ತಲನಿಂದ ಬರೆಲ್ಪಟ್ಟಿರುವದರ ಅರ್ಥವು ಅದು ಯೇಸುವಿನ ಅಧಿಕಾರವನ್ನು ಹೊಂದಿರುತ್ತದೆಂದಾಗಿತ್ತು (1 ಕೊರಿಂಥ 14:37), ಅದು ಶಾಸ್ತ್ರಗಳಿಗಿದ್ದ ಅದೇ ಅಧಿಕಾರವಾಗಿತ್ತು (2 ಪೇತ್ರ 3:15b, 16). ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿರುವ ಪ್ರತಿಯೊಂದು ಪದವು ದೇವರ ಪ್ರಕಟನೆಯಾಗಿರುತ್ತದೆ. ಪೌಲನು ತನ್ನನ್ನು ಕಳುಹಿಸಲ್ಪಟ್ಟಾತನ ಅಧಿಕಾರ ಮತ್ತು ಶಕ್ತಿಯನ್ನು ಅನುಗ್ರಹಿಸಲ್ಪಟ್ಟವನಾಗಿದ್ದನು. ಆತನು ಕೇವಲ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವನಾಗಿರಲಿಲ್ಲ; ಬದಲಾಗಿ, ಆತನು ಪ್ರೇರಣೆಯಿಂದ, ಅಧಿಕಾರಯುಕ್ತವಾಗಿ ತನಗೆ ನೇರವಾದ ಪ್ರಕಟನೆಯ ಮೂಲಕ ಕೊಡಲ್ಪಟ್ಟಿದ್ದ ಯೇಸುವಿನ ಸಂದೇಶವನ್ನು ಬರೆಯುವವನಾಗಿದ್ದನು (1 ಕೊರಿಂಥ 14:37; ಗಲಾತ್ಯ 1:11, 12). ಕೊಲೊಸ್ಸೆಯವರು ಪತ್ರಿಕೆಯನ್ನು ಕ್ರಿಸ್ತನಿಂದ ತಮಗೆ ಬಂದಿರುವ ಸಂದೇಶವೆಂಬದಾಗಿ ಅಂಗೀಕರಿಸಿಕೊಳ್ಳಬೇಕಿತ್ತು.

ಪೌಲನು ಈ ಪತ್ರಿಕೆಯಲ್ಲಿ ತನ್ನನ್ನು ಒಬ್ಬ ಅಪೊಸ್ತಲನೆಂದು ಕರೆದುಕೊಂಡನು, ಆದರೆ ಆತನು ತನ್ನ ಎಲ್ಲಾ ಪತ್ರಿಕೆಗಳಲ್ಲಿ ತನ್ನನ್ನು ಅಪೊಸ್ತಲನಾಗಿರುವ ಬಗ್ಗೆ ಉಲ್ಲೇಖಿಸಿಕೊಳ್ಳಲಿಲ್ಲ.

> . . . ಆತನು ತನ್ನ ಅಧಿಕಾರವನ್ನು ಒತ್ತಿ ಹೇಳಬೇಕಾದ ಅವಶ್ಯಕತೆಯಿರುವ ಸಭೆಗಳಿಗೆ ಬರೆಯುವ ವೇಳೆ ಆತನು ತನ್ನ ಅಪೊಸ್ತಲಿಕ ಆದೇಶದ ಬಗ್ಗೆ ಒತ್ತಿ ಹೇಳುತ್ತಾನೆ, ಆತನು ಫಿಲಿಪ್ಪಿಯವರಿಗೆ ಮತ್ತು ಥೆಸಲೋನಿಕದವರಿಗೆ ಬರೆಯುವ ವೇಳೆ ಅದನ್ನು ಉಲ್ಲೇಖಿಸುವದನ್ನು ಕೈ ಬಿಡುತ್ತಾನೆ, ಯಾಕೆಂದರೆ ಅವರು ಆತನೊಂದಿಗೆ ಒಂದು ಹೃತ್ಪೂರ್ವಕವಾದ ಸ್ನೇಹ ಮತ್ತು ನಿಷ್ಠೆಯ ಬಾಂಧವ್ಯವನ್ನು ಹೊಂದಿದ್ದರೆಂದು ತೋರುತ್ತದೆ. ಅದೇ ರೀತಿಯಲ್ಲಿ, ಆತನು ಒಂದು ಉಪಕಾರವನ್ನು ಮಾಡಬೇಕೆಂದು ಕೇಳುತ್ತಾ ಫಿಲೆಮೋನನಿಗೆ ಬರೆಯುವ ವೈಯಕ್ತಿಕ ಪತ್ರಿಕೆಯಲ್ಲಿ ಆ ಬಿರುದನ್ನು ಬಳಸುವದಿಲ್ಲ. ತದ್ವಿರುದ್ಧವಾಗಿ, ಆತನ ಅಪೊಸ್ತಲತನದ ಬಗ್ಗೆ ಪ್ರಶ್ನಿಸಲಾಗಿದ್ದ ಗಲಾತ್ಯದ

ಸಭೆಗಳಿಗೆ ಬರೆಯುವಾಗ, ಆತನು ಬಲವಾಗಿ ತನ್ನ ಅಪೊಸ್ತಲಿಕ ಸ್ಥಾನದ ಬಗ್ಗೆ ಸಮರ್ಥಿಸಿಕೊಳ್ಳುತ್ತಾನೆ.[5]

ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ (ಗಲಾತ್ಯ 1:1), ಪೌಲನು ತನಗೆ ಅಪೊಸ್ತಲತನವು ದೇವರಿಂದ ಕೊಡಲ್ಪಟ್ಟಿದೆ ಹೊರತು ಮನುಷ್ಯರಿಂದಲ್ಲ ಎಂಬದಾಗಿ ಸಮರ್ಥಿಸಿಕೊಳ್ಳುತ್ತಾನೆ. ತೋರುವ ಪ್ರಕಾರ, ಕೊರಿಂಥದವರು ಆತನ ಅಪೊಸ್ತಲತನವನ್ನು ಪ್ರಶ್ನಿಸಿದ್ದರಾದ್ದರಿಂದ ಆತನು ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ತನ್ನ ಅಪೊಸ್ತಲತನದ ಬಗ್ಗೆ ಪ್ರತಿವಾದ ಮಾಡಿಕೊಳ್ಳುತ್ತಾನೆ (1 ಕೊರಿಂಥ 9:1, 2; 15:9, 10; 2 ಕೊರಿಂಥ 11:5; 12:11, 12). ಆತನು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರಲಿಲ್ಲವಾದರೂ, ಮಿಕ್ಕ ಅಪೊಸ್ತಲರೊಂದಿಗೆ ಸಮಾನನಾಗಿದ್ದನು ಮತ್ತು ಸಮಾನ ಅಧಿಕಾರ ಹೊಂದಿದ್ದನು.

"ಅಪೊಸ್ತಲ" ಎಂಬ ಪದವು ἀπόστολος (*apostolos*, ಅಕ್ಷರಶಃ "ಕಳುಹಿಸಲ್ಪಟ್ಟವನು") ಎಂಬ ಗ್ರೀಕ್ ಪದದ ಅನುವಾದವಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ, ಅದು ಆದೇಶ ಹೊಂದಿದವನು – ಕಳುಹಿಸಲ್ಪಟ್ಟಾತನ ಹೆಸರಿನಲ್ಲಿ, ಆತನ ಪರವಾಗಿ, ಮತ್ತು ಆತನ ಅಧಿಕಾರದೊಂದಿಗೆ ಕ್ರಿಯೆ ಮಾಡುವದಕ್ಕೆ ಒಬ್ಬ ರಾಯಭಾರಿಯಗಿ ಕಳುಹಿಸಲ್ಪಟ್ಟಾತನು – ಎಂಬ ಅರ್ಥವನ್ನು ಪಡೆದುಕೊಂಡಿತು. ಯೇಸು ಕ್ರಿಸ್ತನ ಅಪೊಸ್ತಲರು, ಆತನ ಆಜ್ಞೆಗಳ ಬಗ್ಗೆ ಬೋಧಿಸಬೇಕೆಂಬ ಆದೇಶದೊಂದಿಗೆ ಕಳುಹಿಸಲ್ಪಟ್ಟವರಾಗಿ ಆತನನ್ನು ಪ್ರತಿನಿಧಿಸುವವರಾಗಿದ್ದರು, ಹೊರತು ತಮ್ಮನ್ನು ಅಲ್ಲ (ಮತ್ತಾಯ 28:20).

ಸಾಮಾನ್ಯ ಪದ್ಧತಿಯಂತೆ, "ಅಪೊಸ್ತಲರು" ಎಂಬ ಪದವು ಹನ್ನೆರಡು ಮಂದಿಗೆ, ತನ್ನ ಅನೇಕ ಶಿಷ್ಯರೊಳಗಿಂದ ಯೇಸು ಆರಿಸಿಕೊಂಡ ಚಿಕ್ಕ ಸಂಖ್ಯೆಯ ಗುಂಪಿಗೆ ಅನ್ವಯವಾಗುತ್ತಿತ್ತು (ಲೂಕ 6:13). ಇವರು ಆತನ ವಿಶೇಷ ಪ್ರತಿನಿಧಿಗಳೆಂದು ಆತನಿಂದ ಆದೇಶ ಹೊಂದಿದವರಾಗಿದ್ದರು. ಆತನ ಅಧಿಕಾರದ ಮೇಲೆ ಆಧಾರಗೊಂಡು, ಅವರು ಇತರರಿಗೆ ತನ್ನನ್ನು ಪ್ರತಿನಿಧಿಸುವ ಮೂಲಕ ತನ್ನ ಸೇವೆಯನ್ನು ವಿಸ್ತರಿಸುವಂತೆ ಅವರನ್ನು ಕಳುಹಿಸಿ ಕೊಟ್ಟನು (ಮತ್ತಾಯ 10:1-5; 28:18-20). ಅವರನ್ನು ಅಂಗೀಕರಿಸಿಕೊಂಡವರು ಯೇಸುವನ್ನು ಅಂಗೀಕರಿಸಿಕೊಳ್ಳುವವರಾಗಿದ್ದರು (ಮತ್ತಾಯ 10:40).

ಯೂದನು ಯೇಸುವನ್ನು ಹಿಡುಕೊಟ್ಟ ತನ್ನನ್ನು ಸಾಯಿಸಿಕೊಂಡ ಬಳಿಕ, ಆತನ ಸ್ಥಾನದಲ್ಲಿ ಮತ್ತೀಯನು ಆರಿಸಿಕೊಳ್ಳಲ್ಪಟ್ಟನು; ಹೀಗೆ ಆತನು ಹನ್ನೆರಡು ಮಂದಿಯಲ್ಲಿ ಒಬ್ಬನಾದನು (ಅಪೊಸ್ತಲರ ಕೃತ್ಯಗಳು 1:16-26). ಅನ್ಯಜನರಿಗೆ ಅಪೊಸ್ತಲನಾಗಿದ್ದ (ರೋಮಾ 11:13), ಪೌಲನು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರಲಿಲ್ಲ. ಆತನು ಅನಂತರದಲ್ಲಿ, "ದಿನತುಂಬದೆ ಹುಟ್ಟಿದವನಂತಿರು"ವವನಾಗಿ ಆರಿಸಿಕೊಳ್ಳಲ್ಪಟ್ಟಿದ್ದನು (1 ಕೊರಿಂಥ 15:8).

ಪೌಲನು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರಲಿಲ್ಲವಾದರೂ, ಯೇಸುವಿನ ಪ್ರತಿನಿಧಿಯಾಗಿ ಆತನಿಗೆ ಅವರಿಗಿರುವ ಅದೇ ಅಧಿಕಾರವಿತ್ತು. ಅಪೊಸ್ತಲರು, ಹೊಸ ಒಡಂಬಡಿಕೆಯ ಪ್ರವಾದಿಗಳ ಜೊತೆಯಾಗಿ ಸಭೆಯ ಅಸ್ತಿವಾರ ಆಗಿದ್ದರು (ಎಫೆಸ 2:20). ಅವರು ಪವಿತ್ರಾತ್ಮನ ಸಹಾಯದ ಮೂಲಕವಾಗಿ ಯೇಸುವಿನಿಂದ ಪ್ರಕಟನೆಯನ್ನು ಹೊಂದಿದವರಾದ್ದರಿಂದ (ಯೋಹಾನ 14:26; 16:13; ಎಫೆಸ 3:5), ಅವರನ್ನು ಯೇಸುವಿನ

ಉಪದೇಶದ ವಿಷಯದಲ್ಲಿ ಅಂತಿಮ ಅಧಿಕಾರ ಹೊಂದಿದವರೆಂದು ಅಂಗೀಕರಿಸಿಕೊಳ್ಳಬೇಕಾಗಿತ್ತು (2 ಪೇತ್ರ 3:2). ಆದಿ ಸಭೆಯು ಅವರ ಅಧಿಕಾರಕ್ಕೆ ಗೌರವ ಕೊಟ್ಟಿದ್ದರಿಂದ "ಅಪೊಸ್ತಲರ" ಬೋಧನೆಯಲ್ಲಿ ಮುಂದುವರೆದಿತ್ತು (ಅಪೊಸ್ತಲರ ಕೃತ್ಯಗಳು 2:42).

"ಅಪೊಸ್ತಲ" ಎಂಬ ಪದವು ಯೇಸು ಕ್ರಿಸ್ತನ ಹನ್ನೆರಡು ಅಪೊಸ್ತಲರ ಹುದ್ದೆಯನ್ನು ವಹಿಸಿಕೊಳ್ಳದೆ ಇದ್ದವರಿಗೆ ಸಹ ಅನ್ವಯವಾಗಬಹುದಾಗಿದೆ. ಕಳುಹಿಸಲ್ಪಟ್ಟಿರುವ ಯಾವದೇ ಸಂದೇಶಕನು – ಉದಾಹರಣೆಗೆ, ಅಂತಿಯೋಕ್ಯದಿಂದ ಕಳುಹಿಸಲ್ಪಟ್ಟಿದ್ದ ಬಾರ್ನಬನು (ಅಪೊಸ್ತಲರ ಕೃತ್ಯಗಳು 13:2-4) – ಒಬ್ಬ "ಅಪೊಸ್ತಲ" ಎಂದು ಕರೆಯಲ್ಪಡಬಹುದು (ಅಪೊಸ್ತಲರ ಕೃತ್ಯಗಳು 14:4, 14; ನೋಡಿರಿ 2 ಕೊರಿಂಥ 8:23; ಫಿಲಿಪ್ಪಿ 2:25). ಬಾರ್ನಬನು ಅಂತಿಯೋಕ್ಯದಲ್ಲಿನ ಸಭೆಯ ಒಬ್ಬ ಅಪೊಸ್ತಲನಾಗಿದ್ದನು, ಆದರೆ ವಿಶೇಷವಾದ ಹನ್ನೆರಡು ಮಂದಿಯಲ್ಲೊಬ್ಬನಾಗಿರಲಿಲ್ಲ. ಇದು ಸ್ಪಷ್ಟವಾಗಿರುತ್ತದೆ, ಯಾಕೆಂದರೆ ಯೆರೂಸಲೇಮಿನಲ್ಲಿ ಆತನು ಅವರಿಂದ ಪ್ರತ್ಯೇಕವಾಗಿ ಗುರುತಿಸಲ್ಪಟ್ಟಿದ್ದಾನೆ (ಅಪೊಸ್ತಲರ ಕೃತ್ಯಗಳು 9:27).

ಪೌಲನು ಕ್ರೈಸ್ತರನ್ನು ಹಿಂಸಿಸಬೇಕೆಂದು ದಮಸ್ಕಕ್ಕೆ ಪ್ರಯಾಣ ಮಾಡುತ್ತಿದ್ದ ವೇಳೆ, ಯೇಸು ಆತನಿಗೆ ಕಾಣಿಸಿಕೊಂಡನು. ಆತನು ಈ ಕಾರಣವನ್ನು ಕೊಟ್ಟನು: "ನಿನ್ನನ್ನು ನನ್ನ ಸೇವಕನಾಗಿಯೂ ಸಾಕ್ಷಿಯಾಗಿಯೂ ನೇಮಿಸುವದಕ್ಕೋಸ್ಕರ ನಿನಗೆ ಕಾಣಿಸಿಕೊಂಡಿದ್ದೇನೆ. ನಾನು ಈಗಲೂ ಮುಂದೆ ನಿನಗೆ ಕೊಡಲಿಕ್ಕಿರುವ ದರ್ಶನಗಳಲ್ಲಿಯೂ ನಿನಗೆ ಕಾಣಿಸಿಕೊಂಡದ್ದನ್ನು ಕುರಿತು ನೀನು ಸಾಕ್ಷಿಯಾಗಿರಬೇಕು" (ಅಪೊಸ್ತಲರ ಕೃತ್ಯಗಳು 26:16). ಈ ದರ್ಶನವು ಯೇಸುವಿನ ಅಪೊಸ್ತಲನಾಗುವದಕ್ಕೆ ಬೇಕಾದ ಪೂರ್ವಭಾವಿ ಷರತ್ತನ್ನು ನೆರವೇರಿಸಿತ್ತು (1 ಕೊರಿಂಥ 9:1, 2; 15:8): ಪುನರುತ್ಥಾನಗೊಂಡ ಕ್ರಿಸ್ತನನ್ನು ನೋಡಿರಬೇಕಾದ ಷರತ್ತು (ಅಪೊಸ್ತಲರ ಕೃತ್ಯಗಳು 1:21, 22; 2:32; 10:40, 41). ಯೇಸುವಿನಿಂದ ವೈಯಕ್ತಿಕವಾಗಿ ಆರಿಸಿಕೊಳ್ಳಲ್ಪಟ್ಟು ಮನುಷ್ಯರಿಂದಲ್ಲದೆ, ದೇವರಿಂದಲೇ ಆ ಹುದ್ದೆಗೆ ನೇಮಿಸಲ್ಪಟ್ಟವನಾಗುವ ಮೂಲಕ ಪೌಲನು ಇತರ ಅರ್ಹತೆಗಳನ್ನು ನೆರವೇರಿಸಿದ್ದನು (2 ಕೊರಿಂಥ 1:1; ಗಲಾತ್ಯ 1:1; ಎಫೆಸ 1:1; 2 ತಿಮೊಥೆ 1:1).

ಪೌಲನ ಅಪೊಸ್ತಲತನವು ಸೂಚಕಕಾರ್ಯಗಳಿಂದಲೂ ಅದ್ಭುತಕಾರ್ಗಗಳಿಂದಲೂ ಮಹತ್ಕಾರ್ಯಗಳಿಂದಲೂ ದೃಢೀಕರಿಸಲ್ಪಟ್ಟಿತು (2 ಕೊರಿಂಥ 12:12; ರೋಮಾ 15:18, 19ನ್ನು ಸಹ ನೋಡಿರಿ). ಕೊರಿಂಥದ ಸಭೆಯು ಅದ್ಭುತವಾದ ವರವನ್ನು ಪಡೆದುಕೊಂಡಿತೆಂಬ ವಾಸ್ತವಾಂಶವು ಆತನೊಬ್ಬ ಅಪೊಸ್ತಲನಾಗಿದ್ದನೆಂಬುದಕ್ಕೆ ಪುರಾವೆಯಾಗಿತ್ತು (1 ಕೊರಿಂಥ 12:8-11). ಕೊರಿಂಥದ ಸಭೆಯಲ್ಲಿದ್ದಂತಹ ಪವಿತ್ರಾತ್ಮನ ವರಗಳು, ಅಪೊಸ್ತಲರ ಕೈಗಳ ಮೂಲಕ ಕೊಡಲ್ಪಡುತ್ತಿದ್ದವು (ಅಪೊಸ್ತಲರ ಕೃತ್ಯಗಳು 8:17, 18; 19:6).

ದಮಸ್ಕದ ಮಾರ್ಗದಲ್ಲಿ ಯೇಸು ಪೌಲನಿಗೆ ಕಾಣಿಸಿಕೊಂಡ ವೇಳೆ, ಆತನು ಏನು ಮಾಡಬೇಕೆಂದು ಹೇಳಲ್ಪಡುವದಕ್ಕಾಗಿ ಊರೊಳಕ್ಕೆ ಹೋಗಬೇಕೆಂದು ಯೇಸು ಆತನಿಗೆ ತಿಳಿಸಿದನು (ಅಪೊಸ್ತಲರ ಕೃತ್ಯಗಳು 9:6). ಯೇಸುವಿನಿಂದ ಕಳುಹಿಸಲ್ಪಟ್ಟ ಅನನೀಯನು ಪೌಲನಿಗೆ ಹೀಗೆ ಹೇಳಿದನು, "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ

ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16). ಆತನು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ತನಕ ಪೌಲನ ಪಾಪಗಳು ತೊಳೆಯಲ್ಪಟ್ಟಿರಲಿಲ್ಲ. ಇದಾದ ಬಳಿಕ, ಆತನ ಮಿಕ್ಕ ಯಾವದೇ ಅಪೊಸ್ತಲರಗಿಂತಲೂ ಹೆಚ್ಚು ಪ್ರಯಾಸಪಟ್ಟನು (1 ಕೊರಿಂಥ 15:10).

## "ಕ್ರಿಸ್ತ ಯೇಸುವಿನ"

ಪೌಲನು ತಾನು **ಕ್ರಿಸ್ತ ಯೇಸುವಿನ** ಒಬ್ಬ ಅಪೊಸ್ತಲನಾಗಿದ್ದನೆಂದು ಬರೆದನು. "ಯೇಸು" ಎಂಬುದು Ἰησοῦς (*Iēsous*) ಎಂಬ ಗ್ರೀಕ್ ಪದದಿಂದ ತೆಗೆದುಕೊಳ್ಳಲ್ಪಟ್ಟ ಹೆಸರಾಗಿದೆ. ಅದು ಇಬ್ರಿಯ ಭಾಷೆಯ יְהוֹשֻׁעַ (*Yᵉhoshua'*) ಎಂಬುದಕ್ಕೆ ಸಮಾನವಾಗಿದೆ. ಈ *Yeh* ಮತ್ತು *oshua* ಎಂಬ ಪದಗಳು ಸಂಯೋಜನೆಯು, ಹಳೆಯ ಒಡಂಬಡಿಕೆಯಲ್ಲಿ "ಯೆಹೋಶುವ" ಎಂದು ಅನುವಾದಿಸಲ್ಪಟ್ಟಿರುತ್ತದೆ (ವಿಮೋಚನಕಾಂಡ 17:9), ಅದರರ್ಥವು "ದೇವರು ನಮ್ಮ ರಕ್ಷಣೆ" ಅಥವಾ "ದೇವರು ರಕ್ಷಿಸುವನು" ಎಂದಾಗಿರುತ್ತದೆ. ಇಬ್ರಿಯ *Yeh* ಅಥವಾ *Yah* ಎಂಬುದು "Yahweh" ಎಂಬುದರ ಕ್ಲುಪ್ತ ರೂಪವಾಗಿದೆ, ಆ ಹೆಸರಿನಿಂದಲೇ ದೇವರು ಇಸ್ರಾಯೇಲ್ಯರಿಗೆ ಪರಿಚಿತನಾಗಲಿದ್ದನು. ಇಬ್ರಿಯ ಪದ (יָשַׁע) *yasha'* ಎಂಬದರ ಅರ್ಥವು "ರಕ್ಷಿಸುವನು" ಎಂದಾಗಿರುತ್ತದೆ. ದೇವದೂತನು ಯೋಸೇಫನಿಗೆ ಯೇಸುವಿನ ವಿಷಯವಾಗಿ ಹೀಗೆ ಹೇಳಿದನು, "ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು" (ಮತ್ತಾಯ 1:21). ಆತನು ಸರಿಯಾಗಿ "ಯೇಸು," ಅಥವಾ "ದೇವರು ರಕ್ಷಿಸುವನು" ಎಂದು ಕರೆಯಲ್ಪಟ್ಟಿದ್ದಾನೆ. ಅಪೊಸ್ತಲರ ಕೃತ್ಯಗಳು 4:12ರಲ್ಲಿ ಪೇತ್ರನು ಹೀಗೆ ಹೇಳುತ್ತಾನೆ, "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ."

"ಕ್ರಿಸ್ತನು" (Χριστός, *Christos*) ಎಂಬ ಬಿರುದಿನ ಅರ್ಥವು "ಅಭಿಷೇಕ್ತನು" ಎಂದಾಗಿದ್ದು, ಅದರ ಸಮಾನವಾದ ಇಬ್ರಿಯ ಪದ מָשִׁיחַ (*mashiach*, "ಮೆಸ್ಸೀಯನು") ಎಂಬದರ ಅರ್ಥವು ಅದೇ ಆಗಿದೆ. "ಕ್ರಿಸ್ತನು" ಮತ್ತು "ಮೆಸ್ಸೀಯ" ಎಂಬವುಗಳು ಬಿರುದುಗಳಾಗಿವೆ, ಹೊರತು ಹೆಸರುಗಳಲ್ಲ. ಹಳೆಯ ಒಡಂಬಡಿಕೆಯಲ್ಲಿ, ವ್ಯಕ್ತಿಗಳನ್ನು ಯಾಜಕರು (ವಿಮೋಚನಕಾಂಡ 28:41), ಅರಸರು (1 ಸಮುವೇಲ 15:1), ಮತ್ತು ಪ್ರವಾದಿಗಳನ್ನಾಗಿ (1 ಅರಸು 19:16) ಅಭಿಷೇಕಿಸಲಾ ಗುತ್ತಿತ್ತು. ಯೇಸು ಎಲ್ಲಾ ಮೂರು ಹುದ್ದೆಗಳನ್ನು ವಹಿಸಿಕೊಂಡಿರುತ್ತಾನೆ (ಮತ್ತಾಯ 13:57; ಯೋಹಾನ 18:37; ಇಬ್ರಿಯ 3:1). ಈ ಹುದ್ದೆಗಳಿಗೆ ದೇವರಿಂದ ಅಭಿಷೇಕಿಸಲ್ಪಟ್ಟವನಾಗಿದ್ದಾನೆ (ಲೂಕ 4:18).

ಯೇಸುವಿನ ಆಳ್ವಿಕೆ ಮತ್ತು ಯಾಜಕತ್ವಗಳು ಪರಲೋಕದಿಂದ ಆಗಿವೆ ಮತ್ತು ಭೂಮಿಯ ಮೇಲಿರುವದಿಲ್ಲ: "ಆತನು ಇನ್ನೂ ಭೂಮಿಯ ಮೇಲೆ ಇದ್ದದ್ದೇ ಆದರೆ ಯಾಜಕನಾಗುತ್ತಿರಲಿಲ್ಲ" (ಇಬ್ರಿಯ 8:4). ಯೇಸು ಪರಲೋಕದಲ್ಲಿ ದೇವರ ಸಿಂಹಾಸನದ ಬಲಗಡೆಯಲ್ಲಿ ಯಾಜಕನಾಗಿದ್ದಾನೆ (ಇಬ್ರಿಯ 8:1), ಅಲ್ಲಿದ್ದುಕೊಂಡು ಆತನು ಸಮಸ್ತದ ಮೇಲೆ ಆಳ್ವಿಕೆ ಮಾಡುತ್ತಾನೆ (ಎಫೆಸ 1:20-22; 1 ಪೇತ್ರ 3:22). ಪ್ರವಾದಿಯಾದ ಜೆಕರ್ಯನು ಹೀಗೆ ಬರೆದನು, "ಅವನು . . . ರಾಜವೈಭವವನ್ನು ತಾಳಿ ತನ್ನ ಸಿಂಹಾಸನದಲ್ಲಿ

ಆಸೀನನಾಗಿ ಆಳುವನು; ಮತ್ತು ಯಾಜಕನು ತನ್ನ ಸಿಂಹಾಸನದಲ್ಲಿ ಕೂಡ್ರುವನು; ಅವರಿಬ್ಬರೂ ಸಮ್ಮತಿಸಮಾಧಾನಗಳಿಂದಿರುವರು" (ಜೆಕರ್ಯ 6:13). ಯೇಸು ದೇವರ ಬಲಗಡೆಯಲ್ಲಿ ಆರೋಹನಗೊಂಡಾಗ ಪಡೆದುಕೊಂಡ ಒಬ್ಬ ಯಾಜಕನಾಗಿ ತನ್ನ ಆಳ್ವಿಕೆಯನ್ನು ಮತ್ತು ಹುದ್ದೆಯನ್ನು ಆತನು ತಿರಿಗಿ ಬರುವ ತನಕವೂ ಮುಂದುವರೆಸುವವನಾಗಿದ್ದಾನೆ. ಆ ಸಮಯದಲ್ಲಿ ಆತನು ತನ್ನ ಆಳ್ವಿಕೆಯನ್ನು ತ್ಯಜಿಸಿ ಬಿಡುವನು (1 ಕೊರಿಂಥ 15:22-28). ಆತನು ಆಗ ಭೂಲೋಕದ ಆಳ್ವಿಕೆ ಅಥವಾ ಯಾಜಕತ್ವವನ್ನು ಹೊಂದಿರುವದಿಲ್ಲ.

"ಯೇಸು ಕ್ರಿಸ್ತ" ಎಂಬ ಹೆಸರು ಮತ್ತು ಬಿರುದು ಪೌಲನ ಬರಹಗಳಲ್ಲಿ ಎಪ್ಪತ್ತೊಂಭತ್ತು ಸಾರಿ ಕಾಣಿಸಿಕೊಳ್ಳುತ್ತದೆ. ಅದರ ಹಿಮ್ಮೊಗವಾದ "ಕ್ರಿಸ್ತ ಯೇಸು" ಎಂಬುದು ತೊಂಭತ್ತು ಸಾರಿ ಬಳಸಲ್ಪಟ್ಟಿದೆ. ಮೊದಲಿನದ್ದು ರಕ್ಷಕನಾಗಿ ಆತನಿಗಿರುವ ಕ್ರಿಸ್ತನು ಎಂಬ ಗುರುತನ್ನು ಒತ್ತಿ ಹೇಳುತ್ತದೆ. ಎರಡನೆಯದ್ದು ಕ್ರಿಸ್ತನಾಗಿ ಆತನಿಗಿರುವ ಹುದ್ದೆಯನ್ನು, ರಕ್ಷಕನು ಎಂಬದನ್ನು ಒತ್ತಿ ಹೇಳುತ್ತದೆ. ಬಹುಶಃ, ಕ್ರಮದಲ್ಲಿರುವ ವ್ಯತ್ಯಾಸಕ್ಕೆ ಅತ್ಯಂಥ ಹಚ್ಚಿನ ಒತ್ತನ್ನು ಕೊಡಕೂಡದು.

### "ದೇವರ ಚಿತ್ತಾನುಸಾರವಾಗಿ"

ಪೌಲನು **ದೇವರ ಚಿತ್ತಾನುಸಾರವಾಗಿ** ಎಂಬ ಮಾತುಗಳನ್ನು ಬರೆದಾಗ ಆತನನ್ನು ಅಪೊಸ್ತಲನಾಗಿ ಆರಿಸಿಕೊಂಡವನು ದೇವರೇ ಎಂಬದನ್ನು ದೃಢೀಕರಿಸುತ್ತಾನೆ. ಆತನು ಅಪೊಸ್ತಲನಾಗಿರುವದಕ್ಕೆ ಸ್ವತಃ ತನ್ನನ್ನು ನೇಮಿಸಿಕೊಂಡನಾಗಲಿ ಅಥವಾ ಮನುಷ್ಯರಿಂದ ನೇಮಿಸಲ್ಪಟ್ಟವನಾಗಲಿ ಆಗಿರಲಿಲ್ಲ. ಇದು ಮಹತ್ವವಾದದ್ದು ಯಾಕೆಂದರೆ ಸುಳ್ಳು, ಸ್ವತಃ ನೇಮಿಸಿಕೊಂಡ ಅಪೊಸ್ತಲರು ಮೋಸತನದಲ್ಲಿ ಸಕ್ರಿಯರಾಗಿದ್ದರು (2 ಕೊರಿಂಥ 11:13). ಪೌಲನು ಒಬ್ಬ ನೈಜವಾದ ಅಪೊಸ್ತಲನಾಗಿದ್ದನು, ಯೇಸುವಿನ ಪ್ರಕಟನೆಯ ಮೂಲಕ ಈ ಜವಾಬ್ದಾರಿಯನ್ನು ವಹಿಸಲ್ಪಟ್ಟವನಾಗಿದ್ದನು. ಆತನು ದೇವರ ಕೃಪೆಯ ಮೂಲಕ ಅಪೊಸ್ತಲನಾಗಿದ್ದನು ಮತ್ತು ಯಾವದೇ ವೈಯಕ್ತಿಕ ಶ್ಲಾಘ್ಯ ಅಥವಾ ಯೋಗ್ಯತೆಯಿಂದ ಆಗಿರಲಿಲ್ಲ (1 ಕೊರಿಂಥ 15:10).

"ದೇವರ ಚಿತ್ತಾನುಸಾರವಾಗಿ [θέλημα *thelēma*]" ಎಂಬುದು ಇತಿಹಾಸದುದ್ದಕ್ಕೂ ಸಂಭವಿಸಿದ ಪ್ರಮುಖ ಘಟನೆಗಳಿಗೆ ಕೇಂದ್ರಬಿಂದುವಾಗಿರುತ್ತದೆ. ಏನೋ ಒಂದು ದೇವರ ಚಿತ್ತಾನುಸಾರ ಮಾಡಲ್ಪಟ್ಟಿದೆ ಎಂಬ ಕಾರಣಕ್ಕೆ ಆತನೇ ಅದನ್ನು ಸಂಭವಿಸುವಂತೆ ಮಾಡಿದನು ಎಂದರ್ಥವಾಗುವದಿಲ್ಲ. ಜನರು ಯಾವದು ಸರಿಯೋ ಅದನ್ನು ಮಾಡುವಾಗ ಮತ್ತು ದೇವರಿಗೆ ವಿಧೇಯರಾಗುವಾಗ, ಅವರು ಆತನ ಚಿತ್ತವನ್ನು ಮಾಡುವವರಾಗುತ್ತಾರೆ (1 ಯೋಹಾನ 3:22). ಆತನು ತನ್ನ ಚಿತ್ತವನ್ನು ಮಾಡುವಂತೆ ನಮ್ಮನ್ನು ಒತ್ತಾಯ ಪಡಿಸುವದಿಲ್ಲ; ಆದರೆ ನಾವು ನಮ್ಮನ್ನು ಆತನ ಸೇವೆಗೆ ಒಪ್ಪಿಸಿಕೊಳ್ಳುವಾಗ, ಆತನು ನಮ್ಮ ಮುಖಾಂತರ ಕಾರ್ಯ ಮಾಡುತ್ತಾನೆ (ರೋಮಾ 15:32; 2 ಕೊರಿಂಥ 8:5; ಫಿಲಿಪ್ಪಿ 2:13).

ದೇವರು ಇತರ ಮಹಾನ್ ವ್ಯಕ್ತಿಗಳನ್ನು ಅವರ ಜನನಕ್ಕೆ ಮುಂಚೆಯೇ ಆರಿಸಿಕೊಂಡ ಪ್ರಕಾರವೇ (ನ್ಯಾಯಸ್ಥಾಪಕರು 13:5; ಯೆಶಾಯ 49:1; ಯೆರೆಮೀಯ 1:5; ಲೂಕ 1:13-17), ಆತನು ಅಪೊಸ್ತಲನಾಗಿರುವದಕ್ಕೆ ಪೌಲನನ್ನು ಆತನ ಹುಟ್ಟಿನಿಂದಲೇ ಆರಿಸಿಕೊಂಡನು. ಪೌಲನು ಹೀಗೆ ಬರೆದನು, "ನಾನು ತಾಯಿಯ ಗರ್ಭದಲ್ಲಿರುವಾಗಲೇ ನನ್ನನ್ನು ಪ್ರತ್ಯೇಕಿಸಿ

ತನ್ನ ಕೃಪೆಯಿಂದ ನನ್ನನ್ನು ಕರೆದ ದೇವರು" (ಗಲಾತ್ಯ 1:15).

ಪೌಲನು ತಾನು "ದೇವರ ಚಿತ್ತಾನುಸಾರವಾಗಿ" ಅಪೊಸ್ತಲನು ಎಂದು ಹೇಳಿದ್ದರಲ್ಲಿ ಮತ್ತು ತಾನು ಯೇಸುವಿನಿಂದ ವಿಶೇಷ ಸಾಕ್ಷಿಯಾಗಿರುವದಕ್ಕೆ ನೇಮಿಸಲ್ಪಟ್ಟವನು (ಅಪೊಸ್ತಲರ ಕೃತ್ಯಗಳು 26:16) ಎಂಬ ಆತನ ಹೇಳಿಕೆಯ ಮಧ್ಯದಲ್ಲಿ ಯಾವದೇ ವ್ಯತೀರಿಕ್ತತೆಯಿರುವದಿಲ್ಲ. ಯೇಸು ಪೌಲನನ್ನು ನೇಮಕ ಮಾಡಿದ್ದು ತಂದೆಯ ಚಿತ್ತದ ಪ್ರಕಾರವೇ ಆಗಿದ್ದಿರಬೇಕು, ಯಾಕೆಂದರೆ ಯೇಸುವು ತಂದೆಯ ಚಿತ್ತವನ್ನು ಮಾಡುವದಕ್ಕೆ ಬಂದವನಾಗಿದ್ದನು (ಯೋಹಾನ 5:30).

## "ಸಹೋದರನಾದ ತಿಮೊಥೆಯನೂ"

ಹೊಸ ಒಡಂಬಡಿಕೆಯ ಒಬ್ಬ ಪ್ರಾಮುಖ್ಯ ವ್ಯಕ್ತಿಯಾಗಿ, **ತಿಮೊಥೆಯ**ನು ಇಪ್ಪತ್ನಾಲ್ಕು ಸಾರಿ ಹೆಸರಿಸಲ್ಪಟ್ಟಿದ್ದಾನೆ. 1ನೇ ವಚನದಲ್ಲಿ ತಿಮೊಥೆಯನು ವಂದನೆಗಳನ್ನು ಹೇಳುತ್ತಾನೆಂದು ಪೌಲನು ಉಲ್ಲೇಖಿಸಿದ್ದು, ಬಹುಶಃ ತಿಮೊಥೆಯನಿಗೆ ಕೊಲೊಸ್ಸೆಯವರಲ್ಲಿ ಕೆಲವರ ಪರಿಚಯವಿತ್ತೆಂದು ಸೂಚಿಸುವದಾಗಿದೆ. ಪೌಲನು 2 ಕೊರಿಂಥದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, 1 ಥೆಸಲೋನಿಕದವರಿಗೆ, 2 ಥೆಸಲೋನಿಕದವರಿಗೆ, ಮತ್ತು ಫಿಲೆಮೋನನಿಗೆ ಪತ್ರಿಕೆಗಳಲ್ಲಿನ ಆರಂಭಿಕ ವಂದನಾರ್ಪಣೆಯಲ್ಲಿ ಆತನ ಹೆಸರನ್ನು ಸೇರ್ಪಡೆಗೊಳಿಸಿರುತ್ತಾನೆ. ಆತನನ್ನು ಸೇರ್ಪಡೆಗೊಳಿಸುವದು ತಿಳಿಯಪಡಿಸುವದೇನೆಂದರೆ ಈ ಪತ್ರಿಕೆಯು ಬರೆಯಲ್ಪಡುವ ವೇಳೆ ಆತನು ಪೌಲನ ಸಂಗಡ ಇದ್ದನು ಎಂಬದೆ. ಪೌಲನು ಎಫೆಸದವರಿಗೆ ಪತ್ರಿಕೆಯು ಸೆರೆಮನೆಯಲ್ಲಿದ್ದ ವೇಳೆ ಬರೆದ ಇತರ ಪತ್ರಿಕೆಗಳ ಕಾಲದಲ್ಲಿಯೇ ಬರೆಯಲ್ಪಟ್ಟಾಗ್ಯೂ, ಆ ಪತ್ರಿಕೆಯಲ್ಲಿ ಪೌಲನು ಆತನ ಹೆಸರನ್ನು ಉಲ್ಲೇಖಿಸಲಿಲ್ಲ.

"ತಿಮೊಥೆ" Τιμόθεος (*Timotheos*) ಎಂಬದರ ಅರ್ಥವು "ದೇವರನ್ನು ಘನಪಡಿಸುವದು," ಅಥವಾ "ದೇವರನ್ನು ಘನ ಪಡಿಸುವವನು" ಎಂದಾಗಿದೆ. ತಿಮೊಥೆಯನ ತಂದೆಯು ಒಬ್ಬ ಗ್ರೀಕ್.ನಾಗಿದ್ದರೆ, ಆತನ ತಾಯಿಯಾದ ಯುನೀಕೆಯು ಒಬ್ಬ ಯೆಹೂದಿ ವಿಶ್ವಾಸಿಯಾಗಿದ್ದಳು (ಅಪೊಸ್ತಲರ ಕೃತ್ಯಗಳು 16:1). ಆತನ ತಾಯಿಯು, ಆತನ ಅಜ್ಜಿಯಾದ ಲೋವಿಯ ಜೊತೆಯಾಗಿ, ಆತನಿಗೆ ಚಿಕ್ಕವನಿರುವಾಗಿನಿಂದ ಶಾಸ್ತ್ರಗಳನ್ನು ಕಲಿಸಿ ಕೊಟ್ಟಳು ಮತ್ತು ಆತನ ಧಾರ್ಮಿಕ ಜೀವನದ ಮೇಲೆ ಬಹಳವಾಗಿ ಪ್ರಭಾವ ಬೀರಿದರು (2 ತಿಮೊಥೆ 1:5; 3:15). ಪೌಲನು ಆತನಿಗೆ ಯೇಸುವಿನ ವಾಕ್ಯಗಳನ್ನು ಕಲಿಸಿದನು ಮತ್ತು ಬೋಧನೆ, ಜೀವನ, ಮತ್ತು ಹಿಂಸೆಯನ್ನು ಸಹಿಸಿಕೊಳ್ಳುವ ವಿಷಯದಲ್ಲಿ ಪೌಲನು ಆತನಿಗೆ ಮಾದರಿಯಾಗಿದ್ದನು (2 ತಿಮೊಥೆ 2:2; 3:10, 11, 14). ಪೌಲನು ಆತನನ್ನು "ನನ್ನ ಮಗನು" (1 ತಿಮೊಥೆ 1:18; 2 ತಿಮೊಥೆ 1:2; 2:1) ಎಂದು ಕರೆದನು ಎಂಬ ವಾಸ್ತವಾಂಶವು ಆತನೇ ಅವನಿಗೆ ದೀಕ್ಷಾಸ್ನಾನ ಮಾಡಿಸಿದನೆಂದು ಅರ್ಥವಾಗಬಹುದಾಗಿದೆ. ತಿಮೊಥೆಯನು ಲುಸ್ತ್ರ ಎಂದು ಊರಿಗೆ ಸೇರಿದವನಾದ್ದರಿಂದ, ಪೌಲನು ತನ್ನ ಪ್ರಥಮ ಸುವಾರ್ತಾ ಪ್ರಯಾಣದ ವೇಳೆ ಆ ಊರಿನಲ್ಲಿ ಕಲ್ಲುಗಳಿಂದ ಹೊಡೆಯಲ್ಪಟ್ಟದ್ದನ್ನು ಕಂಡಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 14:19; 2 ತಿಮೊಥೆ 3:11).

ತಿಮೊಥೆಯ ಹೆಸರನ್ನು ಸೇರ್ಪಡೆಗೊಳಿಸಿರುವದು ಆತನು ಪೌಲನ ಪತ್ರಿಕೆಗಳನ್ನು

ಬರೆಯುವದರಲ್ಲಿ ಸಹಾಯ ಮಾಡಿದನೆಂಬದಾಗಿ ಯಾವ ವಿಧದಲ್ಲಿಯೂ ಸೂಚನೆ ನೀಡುವದಿಲ್ಲ. ತಿಮೊಥೆಯನು ಪೌಲನಿಂದ ಕಲಿತುಕೊಂಡಿದ್ದನು, ಹೊರತು ಆತನು ಇವನಿಂದ ಕಲಿತುಕೊಂಡಿರಲಿಲ್ಲ (2 ತಿಮೊಥೆ 2:2). ಪೌಲನು ತನ್ನನ್ನು ಅಪೊಸ್ತಲನೆಂದು ಹೇಳಿಕೊಂಡು ತಿಮೊಥೆಯನನ್ನು ಹಾಗೆ ಕರೆಯದಿರುವ ಮೂಲಕ, ತಾನು ತನ್ನ ಹುದ್ದೆಯಲ್ಲಿ ವಿಶಿಷ್ಟವಾದವನು ಎಂಬದಾಗಿ ಪ್ರತ್ಯೇಕಿಸಿಕೊಂಡನು. ಅಪೊಸ್ತಲನಿಗಿದ್ದ ಅದೇ ಅಧಿಕಾರವು ತಿಮೊಥೆಯನಿಗೆ ಇರಲಿಲ್ಲ.

ಫಿಲಿಪ್ಪಿಯವರಿಗೆ ಮತ್ತು ಫಿಲೆಮೋನನಿಗೆ ಪತ್ರಿಕೆಗಳಲ್ಲಿ, ಮೊದಲ ವಚನದ ಬಳಿಕ ಪೌಲನು ಬರೆದ ಸಂದೇಶದಲ್ಲಿ ತಿಮೊಥೆಯನು ಪಾತ್ರ ವಹಿಸಿದ್ದನೆಂಬುದಾಗಿ ಉಲ್ಲೇಖಿಸಲ್ಪಟ್ಟಿರುವದಿಲ್ಲ. ಹೇಗೂ, ಕೊಲೊಸ್ಸೆಯವರಿಗೆ ಪತ್ರಿಕೆಯ ಪೀಠಿಕೆಯ ಭಾಗದಲ್ಲಿ, “ನಾವು” ಎಂಬ ಪದದ ಬಳಕೆಯನ್ನು ಮುಂದುವರೆಸುತ್ತಾನೆ, ಹೀಗೆ 9ನೇ ವಚನದ ತನಕ ತಿಮೊಥೆಯನನ್ನು ಸೇರಿಸಿಕೊಂಡು ಬರೆಯುತ್ತಾನೆ. 13ನೇ ವಚನದಲ್ಲಿನ “ನಮ್ಮನ್ನು” ಎಂಬುದು ಕೊಲೊಸ್ಸೆಯವರನ್ನು, ಮಾತ್ರವಲ್ಲದೆ ಪೌಲ ಹಾಗೂ ತಿಮೊಥೆಯರನ್ನು ಸಹ ಒಳಗೊಂಡಿರುತ್ತದೆ. 23ನೇ ವಚನದಿಂದ ಪೌಲನು ಪುರುಷಾರ್ಥಕ ಸರ್ವನಾಮವಾದ “ನಾನು” ಎಂಬದನ್ನು ಬಳಸುವದಕ್ಕೆ ಆರಂಭಿಸುತ್ತಾನೆ. ಪೌಲನು ಪತ್ರಿಕೆಯಲ್ಲಿ “ನಾವು” ಮತ್ತು “ನಮ್ಮ” ಎಂಬ ಪದಗಳನ್ನು ಬಳಸಿದಾಗ ತಿಮೊಥೆಯನನ್ನು ಸೇರ್ಪಡೆಗೊಳಿಸಿಕೊಂಡಿರಬಹುದು (ಕೊಲೊಸ್ಸೆ 1:28; 4:3); ಹೇಗೂ, ಪೌಲನು ಈ ಪದಗಳನ್ನು ಸಂಪಾಕೀಯ ಅರ್ಥದಲ್ಲಿ, ತನ್ನನ್ನು ಮಾತ್ರವೇ ಸೂಚಿಸುವದಕ್ಕೆ ಬಳಸಿರಬಹುದಾಗಿದೆ.

ತಿಮೊಥೆಯನ ಬಗ್ಗೆ ಪೌಲನಿಗಿದ್ದ ಉನ್ನತವಾದ ಗೌರವವು ಆತನ ಹೇಳಿಕೆಯಲ್ಲಿ ತೋರಿ ಬರುತ್ತದೆ, “ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು ನನ್ನ ಬಳಿಯಲ್ಲಿ ಬೇರೆ ಯಾರೂ ಇಲ್ಲ” (ಫಿಲಿಪ್ಪಿ 2:20). ಇದನ್ನು ಎರಡು ರೀತಿಗಳಲ್ಲಿ ಅರ್ಥೈಸಬಹುದಾಗಿದೆ. ಪೌಲನೊಂದಿಗೆ ಒಡನಾಟ ಹೊಂದಿದ್ದವರಲ್ಲಿ ಜೊತೆ ಕ್ರೈಸ್ತರ ಬಗ್ಗೆ ಯಥಾರ್ಥವಾಗಿ ಕಳಕಳಿ ಹೊಂದಿರಲಿಲ್ಲ, ಅಥವಾ ತಿಮೊಥೆಯನ ಹಾಗೆ ಫಿಲಿಪ್ಪಿಯವರ ಬಗ್ಗೆ ಬೇರೆ ಯಾರೊಬ್ಬರೂ ಕಳಕಳಿ ಹೊಂದಿರಲಿಲ್ಲ ಎಂಬದೆ. ಪೌಲನು ಬಹುಶಃ ಎರಡನೆಯದ್ದನ್ನು ಸೂಚಿಸಿ ಹೇಳಿದ್ದಿರಬಹುದು.

ಎರಡನೆಯ ಸುವಾರ್ತಾ ಪ್ರಯಾಣದ ವೇಳೆ, ಅಂತಿಯೋಕ್ಯದಲ್ಲಿ, ತಾವು ಮೊದಲ ಸುವಾರ್ತಾ ಪ್ರಯಾಣದ ವೇಳೆ ಸ್ಥಾಪಿಸಿದ್ದ ಸಭೆಗಳಿಗೆ ಪುನಃ ಭೇಟಿಯನ್ನು ಕೊಡುವದಕ್ಕೆ ಹೋಗುವಾಗ ಬಾರ್ನಬನ ಸೋದರ ಸಂಬಂಧಿಯಾದ ಮಾರ್ಕನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೋ ಬೇಡವೋ ಎಂಬ ವಿಷಯದಲ್ಲಿ ಪೌಲ ಹಾಗೂ ಬಾರ್ನಬರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಅದರ ಫಲಿತವೇನಾಗಿತ್ತೆಂದರೆ, ಬಾರ್ನಬನು ಮಾರ್ಕನನ್ನು ಕರೆದುಕೊಂಡು ಕುಪ್ರ ದ್ವೀಪಕ್ಕೆ ಹೋದರೆ, ಪೌಲನು ಪೌಲನು ಸೀಲನನ್ನು ಕರೆದುಕೊಂಡು ಸಿರಿಯ ಮತ್ತು ಕಿಲಿಕ್ಯ ಸೀಮೆಗಳ ಮೂಲಕ ಪ್ರಯಾಣಿಸಿದನು (ಅಪೊಸ್ತಲರ ಕೃತ್ಯಗಳು 15:36-41). ಪೌಲನು ಲುಸ್ತ್ರಕ್ಕೆ ಬಂದು ತಲುಪಿದಾಗ, ಆತನು ತನ್ನ ಸಂಗಡ ತಿಮೊಥೆಯನನ್ನು ಕರಕೊಂಡು ಹೋಗಲು ಬಯಸಿದನು. ಯೆಹೂದ್ಯರ ಕೃಪಾಕಟಾಕ್ಷವನ್ನು ಸಂಪಾದಿಸಿಕೊಳ್ಳು ವದಕ್ಕೋಸ್ಕರ (1 ಕೊರಿಂಥ 9:21) ಮತ್ತು ಅವರಿಗೆ ಸುವಾರ್ತೆಯನ್ನು

ಸಾರುವದಕ್ಕೆ ಶಕ್ತನಾಗುವಂತೆ, ಪೌಲನು ತಿಮೊಥೆಯನಿಗೆ ಸುನ್ನತಿಯನ್ನು ಮಾಡಿಸಿದನು (ಅಪೊಸ್ತಲರ ಕೃತ್ಯಗಳು 16:1-3).

ರಕ್ಷಣೆಗೋಸ್ಕರ ಸುನ್ನತಿಯ ಅಗತ್ಯತೆಯಿಲ್ಲ; ಅದು ಕ್ರೈಸ್ತರಿಗೆ ಐಚ್ಛಿಕವಾಗಿರುತ್ತದೆ (1 ಕೊರಿಂಥ 7:18, 19; ಗಲಾತ್ಯ 5:6; 6:15). ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಮತ್ತು ಹಿರಿಯರು, ಪವಿತ್ರಾತ್ಮನಿಂದ ಪ್ರೇರೆಪಣೆಗೊಂಡವರಾಗಿ ಅನ್ಯಜನರು ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದು ಮತ್ತು ಸುನ್ನತಿಯನ್ನು ಮಾಡಿಸಿಕೊಳ್ಳುವದು ಅನಾವಶ್ಯಕವೆಂದು ತೀರ್ಮಾನಕ್ಕೆ ಬಂದರು. ಪೌಲನು ಅಂತಿಯೋಕ್ಯದಲ್ಲಿದ್ದ ವೇಳೆಯಲ್ಲಿ ಈ ಪ್ರಶ್ನೆಯ ಕುರಿತಾಗಿ ಒಂದು ವಿವಾದವು ಉದ್ಭವವಾಗಿತ್ತು, ಮತ್ತು ಅವರು ಯೆರೂಸಲೇಮಿಗೆ ಬಂದು ತಲುಪಿದಾಗ ವಾಗ್ವಾದವು ಮುಂದುವರೆದಿತ್ತು (ಅಪೊಸ್ತಲರ ಕೃತ್ಯಗಳು 15:1, 5, 24-29). ಪೌಲನು ತಿಮೊಥೆಯನಿಗೆ ಸುನ್ನತಿಯನ್ನು ಮಾಡಿಸಿದನಾದರೂ, ಆತನು ತೀತನಿಗೆ ಸುನ್ನತಿ ಮಾಡಿಸುವದಕ್ಕೆ ನಿರಾಕರಿಸಿದನು (ಗಲಾತ್ಯ 2:3-5). ಅಲ್ಲಿ ಪರಿಸ್ಥಿತಿಗಳು ಏಕ ರೀತಿಯಾಗಿರಲಿಲ್ಲ. ಸಭೆಯು ತೀತನಿಗೆ ಸುನ್ನತಿಯನ್ನು ಕಡ್ಡಾಯವಾಗಿ ಹೇರುವದಕ್ಕೆ ಪ್ರಯತ್ನಿಸುತ್ತಿತ್ತು. ಅದು ತೀತನ ಸ್ವಾತಂತ್ರ್ಯದ ಮೇಲೆ ಅತಿಕ್ರಮಣ ಮಾಡಿದಂತಾಗುತ್ತಿತ್ತು ಮತ್ತು ಸುನ್ನತಿಯು ಅಗತ್ಯವಾಗಿರುತ್ತದೆಂಬ ತಪ್ಪು ಸಂದೇಶವನ್ನು ಇತರ ಕ್ರೈಸ್ತರಿಗೆ ರವಾನಿಸಿರುವದಕ್ಕೆ ಸಾಧ್ಯವಿತ್ತು. ಅದು ಅಗತ್ಯವಿರಲಿಲ್ಲವಾದಾಗ್ಯೂ, ಸುನ್ನತಿಯಿಲ್ಲದವರೊಂದಿಗೆ ಒಡನಾಟ ಹೊಂದಿರುವವನು ಎಂಬ ಕಳಂಕವನ್ನು ಅಳಿಸಿ ಹಾಕಿಕೊಳ್ಳುವದಕ್ಕೋಸ್ಕರ ಪೌಲನು ತಿಮೊಥೆಯನಿಗೆ ಸುನ್ನತಿಯನ್ನು ಮಾಡಿಸಿದನು. ಈ ವಿಧದಲ್ಲಿ ಮಾತ್ರವೇ ಆತನು ಯೆಹೂದ್ಯರಿಗೆ ಪರಿಣಾಮಕಾರಿಯಾಗಿ ಸುವಾರ್ತೆಯನ್ನು ಸಾರುವದಲ್ಲೆ ಶಕ್ತನಾಗಿರುತ್ತಿದ್ದನು.

ಎರಡನೆಯ ಸುವಾರ್ತಾ ಪ್ರಯಾಣದ ವೇಳೆಯಲ್ಲಿ ಮತ್ತು ಪೌಲನ ಉಳಿದ ಜೀವಿತಕಾಲವೆಲ್ಲಾ ತಿಮೊಥೆಯನು ಸತತವಾಗಿ ಪೌಲನ ಸಂಗಡ ಇರುತ್ತಿದ್ದವನಾಗಿದ್ದನು. ಆತನು ಆಸ್ಯ ಸೀಮೆಗೆ ಸೇರಿದವನಾಗಿದ್ದಾಗ್ಯೂ, ಪೌಲನು ಮಕೆದೋನ್ಯವನ್ನು ಪ್ರವೇಶಿಸುವಂತೆ ಕರೆಯಲ್ಪಟ್ಟ ಬಳಿಕ ಆರಂಭವಾದ (ಅಪೊಸ್ತಲರ ಕೃತ್ಯಗಳು 16:9, 10) ಯುರೋಪಿಯನ್ ಸೇವೆಯ ವೇಳೆಯಲ್ಲಿ ಬಹು ಹೆಚ್ಚಾಗಿ ಪೌಲನ ಒಡನಾಟದಲ್ಲಿದ್ದನು. ತಿಮೊಥೆಯನ ಬಗ್ಗೆ ಕಡೆಯದಾಗಿ ಉಲ್ಲೇಖಿಸಲ್ಪಡುವದು 2 ತಿಮೊಥೆ 1:2 ಅಥವಾ ಇಬ್ರಿಯ 13:23, ಇವೆರಡಲ್ಲಿ ಒಂದು ವಚನದೊಳಗೆ ಆಗಿರುತ್ತದೆ, ಅದು ಹೀಗೆ ಹೇಳುತ್ತದೆ, "ನಮ್ಮ ಸಹೋದರನಾದ ತಿಮೊಥೆಯನಿಗೆ ಬಿಡುಗಡೆಯಾಯಿತೆಂಬುದು ನಿಮಗೆ ತಿಳಿದಿರಲಿ. ಅವನು ಬೇಗ ಬಂದರೆ ನಾನೂ ಅವನೊಂದಿಗೆ ಬಂದು ನಿಮ್ಮನ್ನು ಕಾಣುವೆನು." ಆ ಸಂದರ್ಭದಲ್ಲಿ ತಿಮೊಥೆಯನು ಪೌಲನ ಸಂಗಡ ಇದ್ದದ್ದೇ ಆಗಿದ್ದಲ್ಲಿ, ಪೌಲನು ಇಬ್ರಿಯರಿಗೆ ಪತ್ರಿಕೆಯನ್ನು ಬರೆದನೆಂಬುದಕ್ಕೆ ಇದು ಪುರಾವೆಯಾಗಿರುತ್ತದೆ. ಇದಾದ ಬಳಿಕ, ತಿಮೊಥೆಯನ ಕುರಿತಾಗಿ ಇನ್ನಷ್ಟು ಹೆಚ್ಚಿನದೇನೂ ತಿಳಿದು ಬರುವದಿಲ್ಲ. ಆತನ ಹೆಸರು ಆದಿ ಕ್ರೈಸ್ತ ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವದಿಲ್ಲ.[6]

ಪೌಲನು ತಿಮೊಥೆಯನನ್ನು ಇಲ್ಲಿ ಮತ್ತು 2 ಕೊರಿಂಥ 1:1; ಫಿಲೆಮೋನ 1; ಇಬ್ರಿಯ 13:23ರಲ್ಲಿ **ನಮ್ಮ** (ಆಂಗ್ಲ ಬೈಬಲಿನಲ್ಲಿ) [ὁ, *ho,* ಅಕ್ಷರಶಃ "the"] **ಸಹೋದರನೂ** ಎಂದು ಕರೆಯುತ್ತಾನೆ. ಆತನು ನಿರ್ದೇಶಕ ಗುಣವಾಚಿ ಇಲ್ಲದೆಯೇ ಇದೇ ರೀತಿಯ

ಉಲ್ಲೇಖನಗಳನ್ನು ಬೇರೆ ಕಡೆಗಳಲ್ಲಿ ಮಾಡಿರುತ್ತಾನೆ (1 ಥೆಸಲೋನಿಕ 1:1; 2 ಥೆಸಲೋನಿಕ 1:1). 1 ತಿಮೊಥೆ 1:2 ಮತ್ತು 2 ತಿಮೊಥೆ 1:2ರಲ್ಲಿ, ಪೌಲನು ಆತನನ್ನು "ಮಗು" ಮತ್ತು "ಕುಮಾರನಾದ" ಎಂದು ಕರೆಯುತ್ತಾನೆ, ಎರಡೂ ಗ್ರೀಕ್.ನ τέκνον (*teknon*) ಎಂಬ ಪದದಿಂದ ಬಂದವುಗಳಾಗಿವೆ. ತಿಮೊಥೆಯನ ಕಡೆಗೆ ಆತನಿಗಿದ್ದ ಮಮತೆಯು "ನನ್ನ ನಿಜ ಕುಮಾರನಾದ" ಎಂಬ ಪದಗುಚ್ಛದಲ್ಲಿ ಪ್ರತಿಫಲನಗೊಂಡಿರುತ್ತದೆ. ಕ್ವರ್ತನ (ರೋಮಾ 16:23), ಸೊಸ್ಥೆನನ (1 ಕೊರಿಂಥ 1:1), ಮತ್ತು ಅಪೊಲ್ಲೋಸನ (1 ಕೊರಿಂಥ 16:12) ಬಗ್ಗೆ ಸಹ ನಿರ್ದೇಶಕ ಗುಣವಾಚಿ ಬಳಸಲ್ಪಟ್ಟಿದೆ.

ಪೌಲನು ತಿಮೊಥೆಯನನ್ನು "ಜೊತೆ ಅಪೊಸ್ತಲನು" ಎಂದು ಕರೆಯಲಿಲ್ಲ ಯಾಕೆಂದರೆ ಆತನು ಪೌಲನ ಅಪೊಸ್ತಲಿಕ ಅಧಿಕಾರದಲ್ಲಿ ಪಾಲುಗಾರನಾಗಿರಲಿಲ್ಲ. ಹೊಸ ಒಡಂಬಡಿಕೆಯಲ್ಲಿ "ಸಹೋದರರ" ಮತ್ತು "ಸಹೋದರರು" ಎಂಬ ಪದಗಳನ್ನು (ἀδελφός, *adelphos* ಎಂಬದರಿಂದ ಬಂದವುಗಳು) ಶರೀರ ಸಂಬಂಧದ ಸಹೋದರರರನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ಮತ್ತಾಯ 4:18; 12:47; ಅಪೊಸ್ತಲರ ಕೃತ್ಯಗಳು 1:14; 12:2; ಗಲಾತ್ಯ 1:19), ಮತ್ತು ಆತ್ಮೀಕ ಸಹೋದರರರನ್ನು — ಕ್ರಿಸ್ತನಲ್ಲಿ ಸಹೋದರರು (ಅಪೊಸ್ತಲರ ಕೃತ್ಯಗಳು 9:30; 10:23; 21:20; ರೋಮಾ 14:10) — ಒಂದೇ ಜನಾಂಗ ಅಥವಾ ದೇಶಕ್ಕೆ ಸೇರಿದವರನ್ನು (ಅಪೊಸ್ತಲರ ಕೃತ್ಯಗಳು 2:29; 3:17, 22; 7:2; 9:17) — ಸೂಚಿಸುವದಕ್ಕೆ ಬಳಸಲಾಗಿರುತ್ತದೆ.

"ಸಹೋದರ" ಎಂಬುದನ್ನು ಒಂದು ಬಿರುದಾಗಿ ಬಳಸಲಾಗಿರುವದಿಲ್ಲ; ಅದು ಸಂಬಂಧದ ಒಂದು ವ್ಯಕ್ತಪಡಿಸುವಿಕೆಯಾಗಿರುತ್ತದೆ. ಎಲ್ಲಾ ವಿಶ್ವಾಸಿಗಳು ಕ್ರಿಸ್ತನಲ್ಲಿ ಸಮಾನವಾದ ಸಂಬಂಧವನ್ನು ಹೊಂದಿದವರೆಂದು ಪರಿಗಣಿಸಲಾಗಿರುತ್ತದೆ (ಗಲಾತ್ಯ 3:26–28); ಆದರೆ ಅವರಿಗೆಲ್ಲಾ ಒಂದೇ ವಿಧವಾದ ಜವಾಬ್ದಾರಿಗಳು, ವರಗಳು, ಅಥವಾ ಅಧಿಕಾರ ಇರುತ್ತದೆಂದು ಇದರರ್ಥವಾಗಿರುವದಿಲ್ಲ (ರೋಮಾ 12:6–8). ಕ್ರಿಸ್ತನ ಹಿಂಬಾಲಕರು ಸಹೋದರರು ಎಂಬ ವಾಸ್ತವಾಂಶದ ಮೇಲೆ ಆಧಾರವಾಗಿ, ನಾಯಕರು ವಿಶೇಷವಾದ ಬಿರುದುಗಳನ್ನಿಟ್ಟುಕೊಂಡವರಾಗಿ ತಮ್ಮನ್ನು ಇತರ ಶಿಷ್ಯರಿಂದ ಪ್ರತ್ಯೇಕವಾದವರೆಂದು ತೋರ್ಪಡಿಸಿಕೊಳ್ಳಬಾರದು (ನೋಡಿರಿ ಮತ್ತಾಯ 23:8–10).

ಅನನೀಯನು ಪೌಲನ ಪಾಪಗಳು ತೊಳೆಯಲ್ಪಡುವದಕ್ಕೆ ಮುನ್ನವೇ ಆತನನ್ನು "ಸಹೋದರನಾದ ಸೌಲನೇ" ಎಂದು ಕರೆದನು (ಅಪೊಸ್ತಲರ ಕೃತ್ಯಗಳು 22:16). ಇದರಿಂದ (ಮತ್ತು ಪೌಲನು ಯೇಸುವನ್ನು "ಕರ್ತನೇ" ಎಂದು ಕರೆದನು ಎಂಬ ವಾಸ್ತವಾಂಶದಿಂದ; ಅಪೊಸ್ತಲರ ಕೃತ್ಯಗಳು 9:5; 22:8; 26:15) ಕೆಲವರು ತೀರ್ಮಾನಕ್ಕೆ ಬಂದಿರುವದೇನೆಂದರೆ ಪೌಲನು ದಮಸ್ಕದ ಹತ್ತಿರಕ್ಕೆ ಬರುತ್ತಿದ್ದಂತೆ ಯೇಸು ಆತನಿಗೆ ಕಾಣಿಸಿಕೊಂಡ ವೇಳೆಯಲ್ಲಿ ಹೊಸ ಜೀವನವನ್ನು ಪಡೆದುಕೊಂಡನು ಎಂಬದೆ. ಈ ಕೆಳಗಿನ ಹೇಳಿಕೆಯು ಅಪೊಸ್ತಲರ ಕೃತ್ಯಗಳು 9:5ಕ್ಕೆ ಸಂಬಂಧಿಸಿ ಒಂದು ಅಡಿಟಿಪ್ಪಣಿಯಾಗಿ ಒಂದು ಅಧ್ಯಯನ ಬೈಬಲಿನಲ್ಲಿ ಕಾಣಿಸಿಕೊಂಡಿರುತ್ತದೆ: "3–9 ವಚನಗಳು ದಮಸ್ಕ ಪಟ್ಟಣದ ಹೊರಭಾಗದಲ್ಲಿ ಸಂಭವಿಸಿದ ಪೌಲನ ಪರಿವರ್ತನೆ ಕುರಿತ ಘಟನಾವಳಿಯನ್ನು ಒಳಗೊಂಡಿರುತ್ತವೆ." . . . ಪೌಲನು ಅನನೀಯನಿಂದ 'ಸಹೋದರನಾದ ಸೌಲನೇ' ಎಂದು ಕರೆಯಲ್ಪಟ್ಟನು (ವ.17). ಅನನೀಯನು ಪೌಲನನ್ನು ಹೊಸ ಜನನವನ್ನು ಅನುಭವಿಸಿರುವ ವಿಶ್ವಾಸಿಯೆಂದು

ಭಾವಿಸಿಕೊಂಡನು (ಯೋಹಾನ 3:3-5).[7]

ಹಲವಾರು ಸಂದರ್ಭಗಳಲ್ಲಿ, ಪೌಲ ಮತ್ತು ಪೇತ್ರರು ಕ್ರೈಸ್ತರಾಗಿಲ್ಲದ ಯೆಹೂದ್ಯರನ್ನು "ಸಹೋದರರು" ಅಥವಾ "ಸೋದರರು" ಎಂದು ಕರೆದರು (ಅಪೊಸ್ತಲರ ಕೃತ್ಯಗಳು 2:29; 3:17; 7:2; 13:15, 26, 38; 22:1; 23:1, 5, 6; 28:17). ಅನನೀಯನು ಪೌಲನನ್ನು ಒಬ್ಬ *ಯೆಹೂದಿ* ಸಹೋದರನೆಂದು ಸೂಚಿಸಿ ಕರೆದನೇ ಹೊರತು ಒಬ್ಬ *ಕ್ರೈಸ್ತ* ಸಹೋದರನು ಎಂಬದಾಗಿ ಅಲ್ಲ. ಪೌಲನು ದೇವರ ಮಗುವಾಗುವದಕ್ಕೆ ಇನ್ನೂ ದೀಕ್ಷಾಸ್ನಾನವನ್ನು ಮಾಡಿಸಿಕೊಂಡವನಾಗಲಿ, ಅಥವಾ ಪವಿತ್ರಾತ್ಮನನ್ನು ಪಡೆದುಕೊಂಡವನಾಗಲಿ ಆಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 9:17). ಯೇಸುವನ್ನು "ಕರ್ತನೇ" ಎಂದು ಕರೆಯುವ ಮೂಲಕ ಪ್ರತ್ಯುತ್ತರ ನೀಡುವದು ಸಾಕಾದದ್ದಾಗಿರಲಿಲ್ಲ (ಮತ್ತಾಯ 7:21; ಲೂಕ 6:46). ಆತನಿಗೆ ತನ್ನ ಪಾಪಗಳನ್ನು ತೊಳೆದುಕೊಳ್ಳುವದಕ್ಕಾಗಿ ಹೇಗೆ ಕರ್ತನ ಹೆಸರನ್ನು ಹೇಳಿಕೊಳ್ಳಬೇಕೆಂದು ಅನನೀಯನು ಬೋಧಿಸಿ ಕೊಟ್ಟನು.

ಪೌಲನು ತಿಮೊಥೆಯನನ್ನು "ಸಹೋದರನಾದ" ಎಂದು ಕರೆದನು ಯಾಕೆಂದರೆ ಆತನು ಪೌಲನ ಕ್ರೈಸ್ತ ಸಹೋದರನು ಮಾತ್ರವಲ್ಲದೆ ಆತನು ಕೊಲೊಸ್ಸೆಯಲ್ಲಿದ್ದ ಮತ್ತು ವಿಶ್ವದಾದ್ಯಂಥ ಇದ್ದ ಕ್ರೈಸ್ತರಿಗೆಲ್ಲಾ ಸಹ ಸಹೋದರನಾಗಿದ್ದನು. ಆತನು ಕ್ವರ್ತನು, ಸೊಸ್ಥೆನನು, ಮತ್ತು ಅಪೊಲ್ಲೋಸನು ಸೇರಿದಂತೆ ಇತರ ಕ್ರೈಸ್ತರನ್ನು "ಸಹೋದರ" ಎಂದು ಕರೆದನು (ರೋಮಾ 16:23; 1 ಕೊರಿಂಥ 1:1; 16:12). ಈ ಎಲ್ಲಾ ಸಂದರ್ಭಗಳಲ್ಲಿ "ಸಹೋದರ" ಎಂಬುದು ಪೌಲನಿಂದ ಒಬ್ಬ ಶರೀರ ಸಂಬಂಧದ ಸಹೋದರನ್ನಾಗಲಿ, ಒಂದು ಬಿರುದು, ಅಥವಾ ಸಭೆಯಲ್ಲಿನ ಒಂದು ಸ್ಥಾನವನ್ನಾಗಲಿ ಸೂಚಿಸಿ ಬಳಸಲ್ಪಟ್ಟಿರುವದಿಲ್ಲ.

## ಕೊಲೊಸ್ಸೆಯ ನಂಬಿಗಸ್ತರಾದ ಸಹೋದರರು (1:2)

**2ಕೊಲೊಸ್ಸೆಯಲ್ಲಿರುವ ದೇವಜನರಿಗೆ ಅಂದರೆ ಕ್ರಿಸ್ತನಲ್ಲಿರುವ ನಂಬಿಗಸ್ತರಾದ ಸಹೋದರರಿಗೆ ಬರೆಯುವದೇನಂದರೆ – ನಮ್ಮ ತಂದೆಯಾದ ದೇವರಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.**

ಬಹುಶಃ ಸಭೆಗಳಿಗೆ ಬರೆಯುವ ವೇಳೆ ಪೌಲನು ಬೇರೆ ಪದಗಳನ್ನು ಬಳಸುವ ಕುರಿತು ಯಾವದೇ ಮಹತ್ವಪೂರ್ಣವಾದ ಕಾರಣವನ್ನು ಕೊಡುವದಕ್ಕೆ ಆಗದಿರಬಹುದು. ಆತನು ಥೆಸಲೋನಿಕದವರನ್ನು, ಕೊರಿಂಥದವರನ್ನು, ಮತ್ತು ಗಲಾತ್ಯದವರನ್ನು "ಸಭೆಗಳಾಗಿ" ಸಹೋದರರು ಎಂದು ಸಂಬೋಧಿಸಿದನು. ರೋಮಾಪುರದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, ಮತ್ತು ಎಫೆಸದವರಿಗೆ ಬರೆದ ತನ್ನ ಪತ್ರಿಕೆಗಳಲ್ಲಿ, ಆತನು ಅವರನ್ನು "ದೇವಜನರು" ಎಂದು ಸಂಬೋಧಿಸಿದನು. "ಸಭೆ" ಎಂಬ ಪದದ ಅರ್ಥವು ಕ್ರೈಸ್ತರ ಒಂದು ಸಂಘಟಿತವಾದ ಗುಂಪು ಎಂದಾಗಿದ್ದರೆ, "ದೇವಜನರು" ಎಂಬುದು ಆ ಗುಂಪಿನಲ್ಲಿರುವ ವ್ಯಕ್ತಿಗಳಿಗೆ ಅನ್ವಯವಾಗುತ್ತದೆ. ಆತನು ತನ್ನ ಪತ್ರಿಕೆಗಳಿಗೆ ಇನ್ನಷ್ಟು ವೈಯಕ್ತಿಕ ಸ್ಪರ್ಶವನ್ನು ಒದಗಿಸುವದಕ್ಕೆ "ದೇವಜನರು" ಎಂಬ ಪದವನ್ನು ಬಳಸಿರಬಹುದು.

## "ಕೊಲೊಸ್ಸೆಯಲ್ಲಿರುವ ದೇವಜನರಿಗೆ ಅಂದರೆ ಕ್ರಿಸ್ತನಲ್ಲಿರುವ ನಂಬಿಗಸ್ತರಾದ ಸಹೋದರರಿಗೆ"

**ದೇವಜನರಿಗೆ** (ἅγιοι, *hagioi*) ಎಂಬುದು "ಪರಿಶುದ್ಧರು" ಎಂದು ಅನುವಾದಿಸಲ್ಪಟ್ಟಿರುತ್ತದೆ. ಇದರ ಸಜಾತೀಯ ಕ್ರಿಯಾಪದ (ἁγιάζω, *hagiazō,* ''ಶುದ್ಧೀಕರಿಸು") ಎಂಬದರ ಅರ್ಥವು ಒಂದು ವಿಶೇಷ ಉದ್ದೇಶಕ್ಕೋಸ್ಕರ "ಪ್ರತ್ಯೇಕಿಸಿಡು" ಎಂದಾಗಿರುತ್ತದೆ. ಕ್ರೈಸ್ತರನ್ನು ಸೂಚಿಸಿ ಹೇಳಲ್ಪಡುವಾಗ, ಅದರರ್ಥವು ದೇವರ ಉದ್ದೇಶಗಳಿಗೆ ಸೇವೆ ಮಾಡುವದಕ್ಕಾಗಿ ಲೋಕದ ಕೆಟ್ಟ ಕೃತ್ಯಗಳಿಂದ ಪ್ರತ್ಯೇಕಗೊಂಡವರಾಗಿ ಇರುವದು ಎಂದಾಗಿರುತ್ತದೆ. ದೇವಜನರು ಎಂದರೆ ಕ್ರೈಸ್ತ ಸಮುದಾಯದೊಳಗೆ ಸಂತರೆಂದು ಮಂಜೂರು (canonized) ಮಾಡಲ್ಪಟ್ಟಿರುವ ವಿಶೇಷ ಜನರಲ್ಲ, ಆದರೆ ಯೇಸುವಿನ ಎಲ್ಲಾ ಹಿಂಬಾಲಕರಾಗಿದ್ದಾರೆ (ಅಪೊಸ್ತಲರ ಕೃತ್ಯಗಳು 26:10; ರೋಮಾ 8:27; 12:13; 2 ಕೊರಿಂಥ 13:13; 16:2; 2 ಕೊರಿಂಥ 1:1; ಎಫೆಸ 1:1) – ತಮ್ಮನ್ನು ಪ್ರಾಪಂಚಿಕ ಜೀವನದಿಂದ ಪ್ರತ್ಯೇಕಿಸಿಕೊಂಡವರು (2 ಕೊರಿಂಥ 6:17). ಅವರು ಕತ್ತಲೆಯ ರಾಜ್ಯದೊಳಗಿಂದ ಕರೆದು ಕ್ರಿಸ್ತನ ರಾಜ್ಯದೊಳಗೆ ಮತ್ತು ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಲ್ಪಟ್ಟವರಾಗಿದ್ದಾರೆ (ಅಪೊಸ್ತಲರ ಕೃತ್ಯಗಳು 26:18; ಕೊಲೊಸ್ಸೆ 1:13; 1 ಪೇತ್ರ 2:9). "ದೇವಜನರು" ಎಂಬ ಪದದ ಬಳಕೆಯು ಅವರ ಕರೆಯುವಿಕೆಯನ್ನು ಸೂಚಿಸುತ್ತದೆ, ಹೊರತು ಅವರ ನಡವಳಿಯಲ್ಲಿನ ಪಾಪರಹಿತತೆಯನ್ನು ಸೂಚಿಸುವದಿಲ್ಲ. ಪೌಲನು ಕೊರಿಂಥದ ಸಭಿಕರಲ್ಲಿ ಕೆಲವರು ಆತ್ಮೀಕವಾಗಿ ತೊಂದರೆಗೊಳಗಾಗಿದ್ದರು, ಸಿದ್ಧಾಂತಿಕವಾಗಿ ಕದಡಲ್ಪಟ್ಟಿದ್ದರು, ಮತ್ತು ನೈತಿಕವಾಗಿ ಭ್ರಷ್ಟಗೊಂಡಿದ್ದರು ಎಂಬ ವಾಸ್ತವಾಂಶದ ಹೊರತಾಗಿಯೂ ಅವರನ್ನು "ದೇವಜನರು" ಎಂದು ಕರೆದನು (1 ಕೊರಿಂಥ 1:2).

ಪೌಲನು ಒಂದು ಗುಂಪನ್ನು "ದೇವಜನರು" ಎಂದೂ ಇನ್ನೊಂದು ಗುಂಪನ್ನು "ನಂಬಿಗಸ್ತರಾದ ಸಹೋದರರು" ಎಂದೂ ಎರಡು ಬೇರೆ ಬೇರೆ ಗುಂಪುಗಳನ್ನು ಸಂಬೋಧಿಸಿ ಹೇಳಲಿಲ್ಲ. ಎರಡು ಮಾತುಗಳೊಂದಿಗೆ ಸಹ ಒಂದೇ ನಿರ್ದೇಶಕ ಗುಣವಾಚಿಯು (τοῖς, *tois*) ಬಳಸಲ್ಪಟ್ಟಿದೆ – ಅದರರ್ಥವು ಇವುಗಳು ಎರಡು ಬೇರೆ ಬೇರೆ ಗುಂಪುಗಳಲ್ಲ, ಆದರೆ ಒಂದೇ ಗುಂಪನ್ನು ಎರಡು ಬೇರೆ ಬೇರೆ ವಿಧದಲ್ಲಿ ಬಣ್ಣಿಸಲಾಗಿದೆ ಎಂದಾಗಿರುತ್ತದೆ.

Robert G. Bratcher ಮತ್ತು Eugene A. Nida ಹೀಗೆ ಬರೆಯುತ್ತಾರೆ,

> ಗ್ರೀಕ್ ವಾಕ್ಯದ ರೂಪವು "ದೇವಜನರು" [Revised Standard Version (RSV)] ಎಂಬದನ್ನು *ನಂಬಿಗಸ್ತರಾದ* ಎಂಬುದರಂತೆಯೇ, *ಸಹೋದರರು* ಎಂದು ಬದಲಾಗುವ, ಒಂದು ಗುಣವಾಚಕವಾಗಿ ಪರಿಗಣಿಸಬೇಕೆಂದು ಕಡ್ಡಾಯಗೊಳಿಸುತ್ತದೆ, ಇಡೀ ಪದಗುಚ್ಛದೊಂದಿಗೆ ಒಂದೇ ಗುಣವಾಚಿ ಇರುತ್ತದೆ: "ದೇವಜನರಿಗೆ ಅಂದರೆ ಕ್ರಿಸ್ತನಲ್ಲಿ ನಂಬಿಗಸ್ತರಾದ ಸಹೋದರರಿಗೆ."[8]

ಯೋಹಾನ 3:5ರಲ್ಲಿ ಸಹ ಅದೇ ನಿಯಮವು ಆಳಿಕೆ ಮಾಡುತ್ತದೆ, "ನೀರಿನಿಂದಲೂ ಆತ್ಮದಿಂದಲೂ" ಎಂಬ ಪದಗುಚ್ಛದಲ್ಲಿರುವ ಒಂದೇ ನಾಮವಾಚಕ "ದಲೂ" (ἐξ, *ex*) ಸೂಚಿಸುವದೇನೆಂದರೆ ಒಂದು ಸಾರಿ ಹುಟ್ಟುವಿಕೆ ಎಂದರ್ಥ, ಹೊರತು ಎರಡಲ್ಲ. ಒಂದು ಸಾರಿ ಹುಟ್ಟುವಿಕೆಯಲ್ಲಿ ಎರಡು ಅಂಶಗಳಿರುತ್ತವೆ, "ನೀರಿನಿಂದ ಮತ್ತು ಆತ್ಮನಿಂದ."

ಯೋಹಾನನು ಎರಡು ಪ್ರತ್ಯೇಕವಾದ ಘಟನೆಗಳನ್ನು ಬಣ್ಣಿಸುವಾಗ ಬಳಸಿರುತ್ತಿದ್ದ ರೀತಿಯಲ್ಲಿ "ಆತ್ಮನಿಂದ" ಎಂಬುದರ ಮುಂಚೆ ಎರಡನೆಯ "ಇಂದ" ("of", *ex*) ಎಂಬುದನ್ನು ಬಳಸುವದಿಲ್ಲ. ಒಂದೇ *ex* ಒಂದೇ ಘಟನೆಯನ್ನು ಬಣ್ಣಿಸುತ್ತದೆ. ಬಳಿಕ ಏಕ ಸಾರಿ ಬಳಕೆಯು *gennethe* ಎಂಬ ಅನಿಶ್ಚಿತ ಭೂತಕಾಲಿಕ ಸಂಭಾವನಾರ್ಥಕ ಕರ್ಮಣಿ ಕ್ರಿಯಾಪದ ರೂಪದಿಂದ ಸಾಭಿತುಗೊಳಿಸಲ್ಪಡುತ್ತದೆ, ಅದರ ಅಕ್ಷರಶಃ ಅರ್ಥವು ನೀರಿನಿಂದಲೂ ಆತ್ಮನಿಂದಲೂ "ಒಮ್ಮೆ ಹುಟ್ಟಿದರೆ . . ." ಎಂದಾಗಿರುತ್ತದೆ.

ಈ ವಾಸ್ತವಾಂಶಗಳನ್ನು ಒಟ್ಟಾಗಿ ತೆಗೆದುಕೊಳ್ಳುವದು ಯೋಹಾನ 3:3-5ರಲ್ಲಿ ಎರಡು ದೀಕ್ಷಾಸ್ನಾನಗಳು ಅಥವಾ ಹುಟ್ಟುಗಳು (ಸ್ವಭಾವಿಕ ಹುಟ್ಟಿನ ಬಳಿಕ), ಹೆಸರಿಸುವದಾದರೆ "ನೀರಿನ ದೀಕ್ಷಾಸ್ನಾನ" ಮತ್ತು ನಂತರದಲ್ಲಿ "ಪವಿತ್ರಾತ್ಮನ ದೀಕ್ಷಾಸ್ನಾನ" ಎಂದು ಅಥವಾ ನೀತಿವಂತರೆಂಬ ನಿರ್ಣಯದಿಂದ "ಹೊಸದಾಗಿ ಹುಟ್ಟುವ" ಮುಂಚೆ ಮತ್ತು ಶುದ್ಧೀಕರಣದಿಂದ "ಪವಿತ್ರಾತ್ಮನ ದೀಕ್ಷಾಸ್ನಾನ" ಎಂಬದಾಗಿ ಉಲ್ಲೇಖಿಸುತ್ತದೆಂದು ಕಂಡುಕೊಳ್ಳುವ ಯಾವದೇ ಪ್ರವೃತ್ತಿಯ ವಿರುದ್ಧ ಎಚ್ಚರಿಕೆಯಾಗಿರತಕ್ಕದ್ದು . . .

ಆತ್ಮೀಕವಾಗಿ ಒಬ್ಬನು ಒಂದೇ ಒಂದು ಸಾರಿ ಹುಟ್ಟುತ್ತಾನೆ ಮತ್ತು ಅದು "ನೀರಿನಿಂದಲೂ ಆತ್ಮನಿಂದಲೂ" ಆಗಿರುತ್ತದೆ.[9]

**ನಂಬಿಗಸ್ತರಾದ** ಎಂಬುದಕ್ಕಿರುವ ಗ್ರೀಕ್ ಪದವು (πιστοί, *pistoi*), ಅದು "ನಂಬಿಕೆ" πίστις (*pistis*) ಎಂಬ ನಾಮಪದ ಮತ್ತು "ನಂಬಿಕೆಯಿಡು" (πιστεύω, *pisteuō*) ಎಂಬ ಕ್ರಿಯಾಪದದ ಒಂದೇ ಮೂಲದಿಂದ ಬಂದದ್ದಾಗಿದೆ. ಯೇಸುವಿನ ಹಿಂಬಾಲಕರನ್ನು ಬಣ್ಣಿಸುವದಕ್ಕೆ ಒಂದು ಗುಣವಾಚಕವಾಗಿ ಬಳಸಲ್ಪಡುವದರ ಅರ್ಥವು ಆ ಪದವು ಯಾವಾಗಲೂ ಕ್ರೈಸ್ತರರಿಗೆ ಸಂಬಂಧಿಸಲ್ಪಡತಕ್ಕದ್ದೆಂದಾಗುವದಿಲ್ಲ. ಒಬ್ಬ ಸೇವಕನು ತನ್ನ ಯಜಮಾನನಿಗೆ ನಂಬಿಗಸ್ತನಾಗಿರಬಹುದು (ಮತ್ತಾಯ 24:45; 25:21, 23), ಒಬ್ಬ ಉದ್ಯೋಗಸ್ತನು ತನ್ನ ಒಡೆಯನಿಗೆ (ಲೂಕ 12:42; 1 ಕೊರಿಂಥ 4:2), ಒಬ್ಬ ವ್ಯಕ್ತಿಯು ತನ್ನ ಜವಾಬ್ದಾರಿಗಳಿಗೆ ನಂಬಿಗಸ್ತನಾಗಿರಬಹುದು (ಲೂಕ 16:10), ಮತ್ತು ಒಬ್ಬ ಕ್ರೈಸ್ತನು ಕ್ರಿಸ್ತನಿಗೆ ನಂಬಿಗಸ್ತನಾಗಿರಬಹುದು (ಅಪೊಸ್ತಲರ ಕೃತ್ಯಗಳು 16:15). ದೇವರು ಮತ್ತು ಯೇಸು ನಂಬಿಗಸ್ತರಾಗಿದ್ದಾರೆಂದು ಹೇಳಲಾಗಿರುತ್ತದೆ (1 ಕೊರಿಂಥ 1:9; 2 ಥೆಸಲೋನಿಕ 3:3), ಅದೇ ರೀತಿಯೇ ದೇವರ ಸೇವೆಯನ್ನು ಮಾಡುವ ಕೆಲವೊಂದು ಜನರು ಸಹ ಆಗಿದ್ದಾರೆ (ಕೊಲೊಸ್ಸೆ 1:7; 4:7, 9; 1 ತಿಮೊಥೆ 1:12; ಇಬ್ರಿಯ 3:5; 1 ಪೇತ್ರ 5:12; ಪ್ರಕಟನೆ 2:13). ಗ್ರೀಕ್ ವಾಕ್ಯದ ತೀತನಿಗೆ 1:6ರಲ್ಲಿ ತಮ್ಮ ತಂದೆತಾಯಿಗಳಿಗೆ ನಂಬಿಗಸ್ತರು ಮತ್ತು ವಿಧೇಯರಾಗಿರುವ ಮಕ್ಕಳನ್ನು ಸೂಚಿಸಿ ಈ ಪದವು ಬಳಸಲ್ಪಟ್ಟಿದೆ – ಒಬ್ಬ ಅರ್ಹತೆಯುಳ್ಳ ಹಿರಿಯನ ಮನೆಯವರಲ್ಲಿ ಇರಬೇಕಾದ ಗುಣನಡತೆ.

ಕೊಲೊಸ್ಸೆಯಲ್ಲಿರುವ **ಸಹೋದರರು** "ನಂಬಿಗಸ್ತ"ರಾಗಿದ್ದರು. ಬಹುಶಃ ಪೌಲನು ಅವರಲ್ಲಿ ತನ್ನ ದೃಢವಿಶ್ವಾಸವನ್ನು ವ್ಯಕ್ತಪಡಿಸುವದಕ್ಕಾಗಿ ಮತ್ತು ಅವರ ಕ್ರೈಸ್ತ ನಡೆಯಲ್ಲಿ ಅವರನ್ನು ಪ್ರೊತ್ಸಾಹಗೊಳಿಸುವದಕ್ಕಾಗಿ ಅವರನ್ನು "ನಂಬಿಸ್ತರು" ಎಂದು ಸಂಬೋಧಿಸಿರಬಹುದು. ಇಲ್ಲಿ ಸೂಚ್ಯಾರ್ಥವೇನೆಂದರೆ ಅವರು ಯೇಸುವಿನಲ್ಲಿ ತಮ್ಮ ನಂಬಿಕೆಯನ್ನಿಟ್ಟಿದ್ದರು ಮತ್ತು ಆತನನ್ನು ಶ್ರದ್ಧೆಯಿಂದ ಹಿಂಬಾಲಿಸುತ್ತಿದ್ದರಾದ ಕಾರಣ ಅವರು ನಂಬಿಗಸ್ತರಾಗಿದ್ದರು ಎಂಬದೆ. ಅವರು ತಾಳ್ಮೆಯಿಂದ, ದಾರಿ ಬಿಟ್ಟು ಹೋಗದೆ, ಮತ್ತು

ನಿರಂತರವಾಗಿ ಯೇಸುವಿನ ಸೇವೆ ಮಾಡುತ್ತಿದ್ದರು.

ಅವರು "ಸಹೋದರರು" ಆಗಿದ್ದದ್ದು ದೇವರ ಮಕ್ಕಳಾಗಿ ಅವರಿಗಿದ್ದ ಆತ್ಮೀಕ ಸಂಬಂಧದ ಮೇಲೆ ಆಧಾರವಾಗಿತ್ತು (ಗಲಾತ್ಯ 3:26). ಅವರು ದೀಕ್ಷಾಸ್ನಾನದಲ್ಲಿ ಕ್ರಿಸ್ತನನ್ನು ಸೇರಿ ಆತನನ್ನು ಧರಿಸಿಕೊಳ್ಳುವ ಮೂಲಕ ಒಂದೇ ಕುಟುಂಬದ ಭಾಗವಾಗಿದ್ದರು (ಗಲಾತ್ಯ 3:27). "ದೇವಜನರು" ಮತ್ತು "ಸಹೋದರರು" ಎಂಬವುಗಳು ಪುಲ್ಲಿಂಗ ಪದಗಳಾಗಿವೆಯಾದರೂ, ಸಹೋದರರು ಮತ್ತು ಸಹೋದರಿಯರು ಇಬ್ಬರೂ ಸೇರಿದ್ದಾರೆ; ಅವರು ಕ್ರಿಸ್ತನಲ್ಲಿ ಒಂದೇ ಆಗಿದ್ದಾರೆ (ಗಲಾತ್ಯ 3:28), ಆತನ ಒಂದೇ ದೇಹದ ಅಂಗಗಳಾಗಿದ್ದಾರೆ (1 ಕೊರಿಂಥ 12:13). ಕ್ರೈಸ್ತರಾಗಿ, ನಾವು ಗ್ರಹಿಸಿಕೊಳ್ಳತಕ್ಕದ್ದೇನೆಂದರೆ ನಾವೆಲ್ಲರೂ ಸಂಬಂಧಿಗಳು ಎಂಬದೆ. ನಾವು ಒಂದೇ ಕುಟುಂಬದ ಸದಸ್ಯರು ಮತ್ತು ಹೀಗೆ ನಮ್ಮನ್ನು ಒಟ್ಟಾಗಿ ಹಿಡಿದಿಟ್ಟುಕೊಳ್ಳಲು ಒಂದು ಸಾಮಾನ್ಯವಾದ ಬಂಧವನ್ನು ಹೊಂದಿದ್ದೇವೆ.

**ಕ್ರಿಸ್ತನಲ್ಲಿ** ಇರುವದೆಂದರೆ ಒಂದೇ ಆತ್ಮೀಕ ಗೋಲದಲ್ಲಿರುವದು ಎಂದರ್ಥವಾಗಿದೆ. ಯೇಸು ತನ್ನಲ್ಲಿರುವದರ ವಿಚಾರವನ್ನು ಪರಿಚಯಿಸಿದನು (ಯೋಹಾನ 6:56; 14:20; 15:1–7). ಪೌಲನು "ಕ್ರಿಸ್ತನಲ್ಲಿ" ಇರುವದರ ಭಾವನೆಯನ್ನು ತನ್ನ ಬರಹಗಳಲ್ಲಿ ಏಕೀಕರಿಸಿದನು (ರೋಮಾ 8:1; 1 ಕೊರಿಂಥ 15:18; 2 ಕೊರಿಂಥ 5:17; ಕೊಲೊಸ್ಸೆ 1:4, 28; 2:5).

ಕೊಲೊಸ್ಸೆಯವರು "ಕ್ರಿಸ್ತನಲ್ಲಿ" ಇದ್ದರು ಯಾಕೆಂದರೆ "ಕ್ರಿಸ್ತನಲ್ಲಿ ಸೇರುವದಕ್ಕೆ" ದೀಕ್ಷಾಸ್ನಾನ ಮಾಡಿಸಿಕೊಳ್ಳುವಂತೆ ಅವರ ನಂಬಿಕೆಯು ಅವರನ್ನು ಸ್ಪೂರ್ತಿಗೊಳಿಸಿತ್ತು (ರೋಮಾ 6:3; ಗಲಾತ್ಯ 3:27). ದೀಕ್ಷಾಸ್ನಾನದ ಮೂಲಕವಾಗಿ ಕ್ರಿಸ್ತನನ್ನು ಪ್ರವೇಶಿಸುವವರು "ಸಕಲ ಆತ್ಮೀಯ ವರಗಳನ್ನು" ಹೊಂದಿದ್ದಾರೆ (ಎಫೆಸ 1:3), ಅದರಲ್ಲಿ ನಮ್ಮ "ಅಪರಾಧಗಳ ಪರಿಹಾರ" (ಎಫೆಸ 1:7), "ಕೃಪೆ" (2 ತಿಮೊಥೆ 2:1), ಮತ್ತು "ನಿತ್ಯ ಜೀವ" ಸೇರಿರುತ್ತವೆ (1 ಯೋಹಾನ 5:11). ಎಫೆಸ 2:13 ಹೀಗೆ ಹೇಳುತ್ತದೆ, "ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ." ಯೇಸುವಿನಿಂದ ಹೊರಗೆ ಇರುವ ಜನರು ಕ್ರಿಸ್ತನಿಂದ ಬೇರ್ಪಟ್ಟವರಾಗಿದ್ದಾರೆ; ಅವರು ನಿರೀಕ್ಷೆಯಿಲ್ಲದವರು ಮತ್ತು ದೇವರಿಲ್ಲದವರು ಆಗಿದ್ದಾರೆ (ಎಫೆಸ 2:12).

ಈ ಪತ್ರಿಕೆಯು **ಕೊಲೊಸ್ಸೆಯಲ್ಲಿರುವ** ಕ್ರೈಸ್ತರಿಗೆ ಬರೆಯಲ್ಪಟ್ಟಿತ್ತಾದರೂ, ಅದು ಇತರರಿಗೆ ಸಹ ಬರೆಯಲ್ಪಟ್ಟದ್ದಾಗಿತ್ತು (4:16). ಪೌಲನ ಪತ್ರಿಕೆಗಳು ಅಪೊಸ್ತಲನಾದ ಪೇತ್ರನ ಅನುಮೋದನೆಯನ್ನು ಹೊಂದಿದ್ದವು ಮತ್ತು ಇತರ ಎಲ್ಲಾ ಪ್ರೇರಿತ ಶಾಸ್ತ್ರಗಳ ಜೊತೆಯಲ್ಲಿ ಗೌರವಿಸಲ್ಪಡತಕ್ಕವುಗಳಾಗಿವೆ (2 ಪೇತ್ರ 3:15, 16). ಅವುಗಳು ಎಲ್ಲಾ ಕಾಲಗಳ ಎಲ್ಲಾ ಕ್ರೈಸ್ತರಿಗೋಸ್ಕರ ಬೋಧನೆಗಳನ್ನು ಒಳಗೊಂಡಿರುತ್ತವೆ. ಪೌಲನು ಬರೆದದ್ದು ಯೇಸುವಿನ ಆಜ್ಞೆ ಆಗಿರುತ್ತದೆ (1 ಕೊರಿಂಥ 14:37).

## "ನಮ್ಮ ತಂದೆಯಾದ ದೇವರಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ"

ಪೌಲನು ನಿಮಗೆ **ಕೃಪೆಯೂ ಶಾಂತಿಯೂ ಆಗಲಿ** ಎಂದು ಬರೆದನು, ಅದು ಆತನ ಬಹುಪಾಲು ಪತ್ರಿಕೆಗಳಲ್ಲಿನ ವಂದನೆಗಳನ್ನು ಹೇಳುವಿಕೆಗೆ ಹೋಲಿಕೆಯಲ್ಲಿರುತ್ತದೆ. "ಕೃಪೆ" ಎಂಬುದು ಗ್ರೀಕ್ ವಂದನೆ ಹೇಳುವಿಕೆಯಾಗಿದೆ (ವಾಡಿಕೆಯ ಪ್ರಕಾರ ಅದು ಭೌತಿಕ

ಗ್ರೀಕ್‌ನಲ್ಲಿ ದಾತ್ವರ್ಥವಾಚಿಯಲ್ಲಿರುತ್ತದೆ: χαίρειν, *chairein*) ಮತ್ತು "ಶಾಂತಿ" ಎಂಬುದು ಯೆಹೂದಿ ವಂದನೆ ಹೇಳುವಿಕೆಯಾಗಿರುತ್ತದೆ. "ಕೃಪೆ" (χάρις, *charis*) ಒಬ್ಬ ವ್ಯಕ್ತಿಯಲ್ಲಿರಬಹುದಾದ ಅಥವಾ ಆತನಿಂದ ವ್ಯಕ್ತಪಡಿಸಲ್ಪಡುವ ಮೋಹಕತೆ, ಚೆಲುವು, ಮತ್ತು ದಯೆ ಮತ್ತು ಯಾರ ಮೇಲೆ ಅದು ಸುರಿಸಲ್ಪಡುತ್ತದೋ ಅವರಿಂದ ಅನುಭವಿಸಲ್ಪಡುವಂಥದ್ದಾಗಿದೆ. ಶಾಸ್ತ್ರಗಳು "ಕೃಪೆ" ಎಂಬ ಪದದ ಐದು ಬಳಕೆಗಳನ್ನು ಮಾಡುತ್ತದೆ:

1. ಸೌಜನ್ಯತೆ ಅಥವಾ ಮೋಹಕತೆ (ಲೂಕ 4:22; ಕೊಲೊಸ್ಸೆ 4:6).
2. ಅಂಗೀಕಾರ ಅಥವಾ ದಯೆ (ಲೂಕ 1:30; ಅಪೊಸ್ತಲರ ಕೃತ್ಯಗಳು 2:47).
3. ವರಗಳು (2 ಕೊರಿಂಥ 4:15; 8:4).
4. ಸ್ತೋತ್ರ ಮತ್ತು ಕೃತಜ್ಞತೆ (ಲೂಕ 17:9; 1 ಕೊರಿಂಥ 15:57; ಕೊಲೊಸ್ಸೆ 3:16; 2 ತಿಮೊಥೆ 1:3).
5. ಅರ್ಹತೆ ಮತ್ತು ಯೋಗ್ಯತೆಯಿಂದಲ್ಲ, ಆದರೆ ಉಚಿತವಾಗಿ ಕೊಡಲ್ಪಡುವ ದಯೆ (ರೋಮಾ 3:24; ಎಫೆಸ 2:8).

*Charis* ಮತ್ತಾಯ ಅಥವಾ ಮಾರ್ಕನ ಸುವಾರ್ತೆಗಳಲ್ಲಿ ಕಾಣಿಸಿಕೊಳ್ಳುವದಿಲ್ಲ, ಆದರೆ ಲೂಕನ ಸುವಾರ್ತೆಯಲ್ಲಿ ಅದು ಎಂಟು ಸಾರಿ, ಯೋಹಾನನ ಸುವಾರ್ತೆಯಲ್ಲಿ ನಾಲ್ಕು ಸಾರಿ, ಮತ್ತು ಪೌಲನ ಪತ್ರಿಕೆಗಳಲ್ಲಿ ನೂರು ಸಾರಿ ಕಾಣಿಸಿಕೊಳ್ಳುತ್ತದೆ.

ಸೆಪ್ಟುಜಿಂಟ್ (LXX) *charis* ನ್ನು ಇಬ್ರಿಯ ಭಾಷೆಯ חֵן (*chen*) ಪದದ ಅನುವಾದವಾಗಿ ಬಳಸುತ್ತದೆ, ಅದು ಒಬ್ಬ ಉನ್ನತನಾದವನಿಂದ ಕೊಡಲ್ಪಡುವ ಆಶೀರ್ವಾದಗಳನ್ನು ಆನಂದಿಸುವದನ್ನು ಸೂಚಿಸುತ್ತದೆ. ಅದರರ್ಥವು ಜನರಿಗೆ ತೋರಿಸಲಾಗುವ ದೇವರ ಕೃಪಾಭರಿತ ದಯೆ ಮತ್ತು ಕನಿಕರ ಎಂದಾಗಬಹುದು (ರೋಮಾ 15:15) ಅಥವಾ ಆತನು ಅರ್ಹರಲ್ಲದಿದ್ದರೂ ಪಾಪಿಗಳಿಗೆ ನೀಡುವ ದಯೆ ಎಂಬರ್ಥವೂ ಆಗಬಹುದು (ಎಫೆಸ 2:8). ಮನುಷ್ಯ ಮತ್ತು ದೇವರ ನಡುವಿನ ಅಂತರವು ಕೃಪೆಯಿಂದ ತುಂಬಲ್ಪಟ್ಟಿರುತ್ತದೆ.

ಯೇಸು ಶಿಲುಬೆಯ ಮೇಲೆ ಸುರಿಸಿದ ತನ್ನ ರಕ್ತದ ಮುಖಾಂತರ (ಎಫೆಸ 1:7) ಕೃಪೆಯನ್ನು ಎಲ್ಲರಿಗೂ ಲಭ್ಯಗೊಳಿಸಿದ್ದಾನೆ (ರೋಮಾ 5:15). ಈ ಕೃಪೆಗೆ ದಾರಿಯು ನಂಬಿಕೆಯ ಮೂಲಕ ತೆರೆಯಲ್ಪಡುತ್ತದೆ (ರೋಮಾ 5:2), ಆ ನಂಬಿಕೆಯು ದೇವರ ಚಿತ್ತಕ್ಕೆ ಸ್ಪಂದಿಸುವ ನಂಬಿಕೆಯಾಗಿರುತ್ತದೆ (ಯಾಕೋಬ 2:24). ದೇವರ ಕೃಪಾವಂತಿಕೆಯ ಕಾರಣದಿಂದ ರಕ್ಷಣೆಯು ಕೊಡಲ್ಪಡುತ್ತದೆ (ಎಫೆಸ 2:8, 9) ಮತ್ತು ಅದು ಮಾನವನ ಯೋಗ್ಯತೆಯಿಂದ ಸಾಧಿಸಲ್ಪಡಲಾರದು. ಯೇಸು ತನ್ನ ಜನರಿಗೋಸ್ಕರ ರಕ್ಷಣೆಯನ್ನು ಸಂಪಾದಿಸಿಕೊಂಡನಾದರೂ (ಮತ್ತಾಯ 1:21), ಆತನಿಗೆ ವಿಧೇಯರಾಗುವ ಮೂಲಕ ಮಾತ್ರವೇ ಆ ರಕ್ಷಣೆಯನ್ನು ಸ್ವೀಕರಿಸಿಕೊಳ್ಳಬಹುದಾಗಿದೆ (ಇಬ್ರಿಯ 5:9). ಆತನು ತನ್ನ ಮರಣದಲ್ಲಿ ಮತ್ತೊಬ್ಬರ ಕೈಗಳಲ್ಲಿ ಒಪ್ಪಿಸಿಕೊಂಡನು, ಹೀಗೆ, ಆತನು ರಕ್ಷಣೆಯನ್ನು ಉಂಟು ಮಾಡುವದಕ್ಕೆ ಯಾವ ಕ್ರಿಯೆಯನ್ನು ಮಾಡಲಿಲ್ಲ. ಅದೇ ರೀತಿಯಲ್ಲಿ, ಆತನ ಮರಣದಲ್ಲಿ

ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದರೆ (ರೋಮಾ 6:3) ಮತ್ತು ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುವದಕ್ಕೆ (ಅಪೊಸ್ತಲರ ಕೃತ್ಯಗಳು 2:38) ಮತ್ತೊಬ್ಬರ ಕೈಗಳಲ್ಲಿ ಒಪ್ಪಿಸಿ ಕೊಡುವದು ಅವಶ್ಯಕವಾಗಿರುತ್ತದೆ. ಒಬ್ಬ ಪಾಪಿಯು ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಲ್ಪಡುವಾಗ ಕ್ರಿಸ್ತನಲ್ಲಿನ ಕೃಪೆಯು ಪರಿಣಾಮಕಾರಿಯಾಗುತ್ತದೆ (2 ತಿಮೊಥೆ 2:1). ಮಾನವ ಯೋಗ್ಯತೆಯ ನೀತಿಕೃತ್ಯಗಳಿಂದಲ್ಲದೆ, ದೀನವಾದ ಒಪ್ಪಿಸಿಕೊಳ್ಳುವಿಕೆ ಮೂಲಕ, ಪುನರ್ಜನ್ಮದ ತೊಳೆಯುವಿಕೆ ದೊರಕುತ್ತದೆ (ತೀತನಿಗೆ 3:5-7). ಹೀಗೆ ಯೇಸುವಿನ ಮರಣ ಮತ್ತು ಜೀವದ ಮೂಲಕ ರಕ್ಷಣೆ ಒದಗಿಸಲ್ಪಡುತ್ತದೆ (ರೋಮಾ 5:9, 10).

ಕೊಲೊಸ್ಸೆಯವರಿಗೆ ತನ್ನ ವಂದನೆಗಳನ್ನು ಹೇಳುವಿಕೆಯಲ್ಲಿ, ಪೌಲನು ರಕ್ಷಣೆಯನ್ನುಂಟು ಮಾಡುವ ಯೋಗ್ಯತೆಯಿಲ್ಲದೆ ಸಿಕ್ಕುವ ದಯೆಯನ್ನು ಸೂಚಿಸಿ ಹೇಳಲಿಲ್ಲ. ಅವರು ಮುಂಚೆಯೇ ರಕ್ಷಣೆಯನ್ನು ಹೊಂದಿದವರಾಗಿದ್ದರು. ಬದಲಾಗಿ, ಅವರ ಶಾರೀರಿಕ ಮತ್ತು ಆತ್ಮೀಕ ಹಿತಕ್ಕಾಗಿ ಒದಗಿಸುವಂಥ ಅವರ ಸೃಷ್ಟಿಕರ್ತನಿಂದ ಅನುದಿನದ ದಯೆಗಳನ್ನು ಅವರು ಪಡೆದುಕೊಳ್ಳಬೇಕೆಂದು ಆತನು ಬಯಸಿದನು. ಕ್ರೈಸ್ತತ್ವದಲ್ಲಿ ರಕ್ಷಣೆಗೋಸ್ಕರ ಕೃಪೆಯನ್ನು ಪಡೆದುಕೊಳ್ಳುವದು ಮಾತ್ರವೇ ಅಡಕವಾಗಿರುವದಿಲ್ಲ, ಆದರೆ ಅದರಲ್ಲಿ ಆತ್ಮಕ್ಕೆ ಆರೋಗ್ಯಕರ ಸಂತೃಪ್ತಿಯನ್ನು ತರುವಂತಹ ನಿರಂತರವಾಗಿ ಸಮೃದ್ಧಿಯ ಜೀವನ ಸಹ ಸೇರಿರುತ್ತದೆ (ಯೋಹಾನ 10:10). ಈ ಕೃಪೆಯನ್ನೇ ಪೌಲನು ದೇವರಿಂದ ಅವರಿಗೆ ಸಿಕ್ಕಬೇಕೆಂದು ಇಚ್ಛಿಸಿದನು.

ಅಲ್ಲದೆ ಪೌಲನು **ದೇವರಿಂದ ಶಾಂತಿಯೂ** ಸಹ ಸಿಕ್ಕಲೆಂದು ಉಲ್ಲೇಖಿಸಿದನು. "ಶಾಂತಿ" ಎಂಬುದಕ್ಕೆ ಇಬ್ರಿಯ ಪದವು שָׁלוֹם (*shalom*), ಅದರರ್ಥವು ದೇವರಿಂದ ಸಿಕ್ಕುವ ಆಶಿರ್ವಾದಗಳ ಕಾರಣದಿಂದ ಆನಂದಿಸುವಂಥ ಒಂದು ಆರೋಗ್ಯಕರ ಸ್ಥಿತಿಯಾಗಿರುತ್ತದೆ. ಗ್ರೀಕ್‌ನಲ್ಲಿ "ಶಾಂತಿ" ಎಂಬುದಕ್ಕಿರುವ ಪದವು εἰρήνη (*eirēnē*). ಶಾಂತಿಯು ಸಾಮರಸ್ಯ, ತೊಂದರೆಯಿಲ್ಲದ ಸೌಖ್ಯ, ಕಳವಳಗೊಂಡ ಹೃದಯದಿಂದ ಸ್ವಾತಂತ್ರ್ಯ, ಮತ್ತು ಕಾದಾಟ ಅಥವಾ ಆಂತರಿಕ ಹೋರಾಟಗಳಿಲ್ಲದ ಆತ್ಮೀಕ ವಿಶ್ರಾಂತಿ ಇವುಗಳನ್ನೊಳಗೊಂಡಿರುತ್ತದೆ. ಯೇಸು ತನ್ನ ಹಿಂಬಾಲಕರಿಗೆ ಶಾಂತಿಯನ್ನು ಒದಗಿಸುತ್ತಾನೆ. ಇದು ಲೋಕವು ಕೊಡುವಂತಹ ಶಾಂತಿಯಾಗಿರುವದಿಲ್ಲ (ಯೋಹಾನ 14:27), ಅಲ್ಲದೆ ಇದು ಉಪದ್ರವಗಳಿಲ್ಲದ ಶಾಂತಿಯೂ ಆಗಿರುವದಿಲ್ಲ (ಯೋಹಾನ 16:33).

ಈ ಮುಂಚೆಯೇ ಯೇಸುವಿನ ಮೂಲಕ ದೇವರೊಂದಿಗೆ ಸಂಧಾನಗೊಳ್ಳುವ ಮೂಲಕ ಆತನ ಜೊತೆಯಲ್ಲಿ ಶಾಂತಿಯನ್ನು ಕಂಡುಕೊಂಡಿದ್ದ ಕ್ರೈಸ್ತರಿಗೆ ಈ ಪತ್ರಿಕೆಯು ಬರೆಯಲ್ಪಟ್ಟಿತ್ತು. ಈ ಶಾಂತಿಯ ಬಗ್ಗೆ ಕೊಲೊಸ್ಸೆ 1:20-22ರಲ್ಲಿ ಚರ್ಚಿಸಲಾಗುತ್ತದೆ, ಆದರೆ ಈ ಹಂತದಲ್ಲಿ ಪೌಲನ ಕಳಕಳಿಯು ಇದು ಆಗಿರಲಿಲ್ಲ. ಬದಲಾಗಿ, ದೇವರೊಂದಿಗೆ ಸಂಧಾನಗೊಳ್ಳುವದರಿಂದ ಸಿಕ್ಕುವ ಶಾಂತಿಯಲ್ಲಿ – ಅಂದರೆ, ಕಳವಳದಿಂದ ಕೂಡಿರುವ ಪ್ರಪಂಚದಲ್ಲಿ ಒಂದು ಸಮಾಧಾನ ಮತ್ತು ಪ್ರಶಾಂತ ಹೃದಯ – ತನ್ನ ಸಹೋದರರು ಮುಂದುವರೆಯಬೇಕೆಂದು ಪೌಲನ ಹಾರೈಕೆಯಾಗಿತ್ತು.

ಕ್ರೈಸ್ತರಾಗಿ, ನಾವು ಒಂದು "ಪ್ರಶಾಂತ ಮತ್ತು ಸಮಾಧಾನ ಜೀವನ"ಕ್ಕಾಗಿ ಪ್ರಾರ್ಥಿಸಬೇಕು (1 ತಿಮೊಥೆ 2:3) ಮತ್ತು ನಮ್ಮ ಚಿಂತೆಗಳನ್ನೆಲ್ಲಾ ಪ್ರಾರ್ಥನೆಗಳಲ್ಲಿ ದೇವರಿಗೆ

ಒಪ್ಪಿಸಬೇಕು (1 ಪೇತ್ರ 5:7). ಅದರ ಫಲಿತವೇನಾ ಗುವದೆಂದರೆ “ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು” (ಫಿಲಿಪ್ಪಿ 4:6, 7). ದೇವರ ಶಾಂತಿಯನ್ನು ಹೊಂದಬೇಕೆಂದರೆ, ನಮ್ಮ ಆಲೋಚನೆ ಮತ್ತು ಕ್ರಿಯೆಗಳು ದೇವರ ಅಪೇಕ್ಷೆಗಳಿಗೆ ಹೊಂದಾಣಿಕೆಯಾಗಿರಬೇಕು (ಫಿಲಿಪ್ಪಿ 4:8, 9). ಕೊಲೊಸ್ಸೆಯವರಿಗೆ ಏಕೈಕ ಸತ್ಯವಾದ ಮೂಲನಾದ ದೇವರಿಂದ ಕೃಪೆಯೂ ಶಾಂತಿಯೂ ಉಂಟಾಗಲಿ ಎಂದು ಪೌಲನು ಬಯಸಿದನು.

ಪೌಲನು ಮುಂದುವರೆದು **ನಮ್ಮ ತಂದೆಯಾದ** ಎಂದು ಹೇಳುತ್ತಾನೆ. ಪೌಲನ ಪತ್ರಿಕೆಗಳಲ್ಲಿನ ಪೀಠಿಕೆಯಲ್ಲಿ “ಮತ್ತು ಯೇಸು ಕ್ರಿಸ್ತನ” ಎಂದು ಸೇರ್ಪಡೆಗೊಳಿಸದೆಯೇ ತಂದೆಯನ್ನು ಉಲ್ಲೇಖಿಸಿರುವದು 2ನೇ ವಚನದಲ್ಲಿ ಮಾತ್ರವೇ ಆಗಿರುತ್ತದೆ. “ದೇವರು” ಎಂಬ ಪದವು ದೇವತ್ವವನ್ನು ಸೂಚಿಸುತ್ತದೆ. ತಂದೆಯನ್ನು ಉಲ್ಲೇಖಿಸುವದರ ಜೊತೆಗೆ, “ದೇವರು” ಎಂಬದು ಯೇಸುವನ್ನು ಸೂಚಿಸುವದಕ್ಕೆ (ಯೋಹಾನ 1:1) ಮತ್ತು ಪವಿತ್ರಾತ್ಮನನ್ನು ಸೂಚಿಸುವದಕ್ಕೆ ಸಹ ಬಳಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 5:3, 4b). ಇಲ್ಲಿ, ಹೊಸ ಒಡಂಬಡಿಕೆಯ ಬಹುಪಾಲು ಸಂದರ್ಭಗಳಲ್ಲಿರುವ ಪ್ರಕಾರವೇ, “ದೇವರು” ಎಂಬುದು ಯೇಸು ಅಥವಾ ಪವಿತ್ರಾತ್ಮನ ಬದಲಾಗಿ ತಂದೆಯನ್ನು ಸೂಚಿಸಿ ಬಳಸಲಾಗಿದೆ. ಕ್ರೈಸ್ತರು ದೇವರನ್ನು ಉತ್ಪತ್ತಿ ಮತ್ತು ಪೋಷಣೆಯ ಅರ್ಥದಲ್ಲಿ “ನಮ್ಮ ತಂದಯೇ” ಎಂದು ಕರೆಯಬಹುದು. ಒಂದು ಮಗುವು ತನ್ನ ಉತ್ಪತ್ತಿ ಮತ್ತು ಪೋಷಣೆಗೆ ತನ್ನ ಭೂಲೋಕದ ತಂದೆಯ ಋಣದಲ್ಲಿರುವ ಪ್ರಕಾರವೇ, ಎಲ್ಲಾ ಜನರು ತನ್ನ ಅಸ್ತಿತ್ವ ಮತ್ತು ಶಾರೀರಿಕ ಹಾಗೂ ಆತ್ಮೀಕ ಎರಡಕ್ಕೂ ಸಂಬಂಧಿಸಿದ ತಮ್ಮ ಅಗತ್ಯತೆಗಳ ಒದಗಿಸುವಿಕೆಗೆ ದೇವರಿಗೆ ಋಣಸ್ಥರಾಗಿರುತ್ತಾರೆ. ಒಂದು ವಿಶೇಷ ಅರ್ಥದಲ್ಲಿ, ಕ್ರೈಸ್ತರು ಆತನನ್ನು ನಮ್ಮ ತಂದೆಯೇ ಎಂದು ಕರೆಯಬಹುದು. ಪೌಲನು ಆಗಾಗ್ಗೆ “ನಮ್ಮ ತಂದೆಯಾದ” ಎಂಬದಾಗಿ ಬಳಸಿದನು, ಹೆಚ್ಚಿನ ಮಟ್ಟಿಗೆ ತನ್ನ ವಂದನೆ ಹೇಳುವಿಕೆಯಲ್ಲಿ ಬಳಸಿದನು. ಯೇಸು ತನ್ನ ಶಿಷ್ಯರಿಗೆ ದೇವರನ್ನು “ನಮ್ಮ ತಂದೆಯೇ” ಎಂದು ಕರೆಯುವಂತೆ ಬೋಧಿಸಿದನು. ಸತತವಾಗಿ, ಕ್ರಿಸ್ತನು ದೇವರನ್ನು “ನಿಮ್ಮ ತಂದೆ” ಎಂದು ಕರೆದನು (ಮತ್ತಾಯ 5:16, 45ರಲ್ಲಿ ಇರುವ ಪ್ರಕಾರ).

## ಹೆಚ್ಚಿನ ಅಧ್ಯಯನಕ್ಕಾಗಿ: “ಕ್ರಿಸ್ತನಲ್ಲಿ”

“ಕ್ರಿಸ್ತನಲ್ಲಿ” ಇರುವದು ಎಂಬ ಪ್ರಾಮುಖ್ಯವಾದ ಭಾವನೆಯು ಹೆಚ್ಚಾಗಿ ಪೌಲನಿಂದ ಬಳಸಲ್ಪಟ್ಟಿರುತ್ತದೆ. (ಆತನ ಪತ್ರಿಕೆಗಳನ್ನ ಹೊರತು ಪಡಿಸಿ ಅದು ಯೋಹಾನ 15:2–6; 1 ಪೆತ್ರ 3:16; 5:14; 1 ಯೋಹಾನ 1:5; 2:5, 27, 28; 3:6; 5:11; ಪ್ರಕಟನೆ 14:13.) ಕೊಲೊಸ್ಸೆ 1 ಮತ್ತು 2 ಅಧ್ಯಾಯಗಳಲ್ಲಿ, ಕ್ರಿಸ್ತನ ಗುಣಗಳನ್ನು ಮತ್ತು ಆತನೊಂದಿಗೆ ಕ್ರೈಸ್ತರಿಗಿರುವ ಸಂಬಂಧವನ್ನು ವರ್ಣಿಸುವದಕ್ಕೆ “ಕ್ರಿಸ್ತನಲ್ಲಿ” ಅಥವಾ “ಆತನಲ್ಲಿ” ಎಂಬ ಪದಗಳನ್ನು ಬಳಸಿದನು.

ಕ್ರಿಸ್ತನಲ್ಲಿ ಒಂದು ಆತ್ಮೀಕ ಸಂಬಂಧದಲ್ಲಿರುವವರು (1:2, 4, 28).
ಆತನ ಆಧಾರವಾಗಿರುವ ಶಕ್ತಿ (1:17)

ಎಲ್ಲಾ ಸೃಷ್ಟಿಯ ಅಗತ್ಯತೆಗಳನ್ನು ಒದಗಿಸುವದರಲ್ಲಿ ಆತನ ಸರ್ವಸಂಪೂರ್ಣತೆ (1:19).
ಕ್ರೈಸ್ತರು ನಡೆಯಬೇಕಾದ ಮತ್ತು ಭಕ್ತಿವೃದ್ಧಿಗೊಳ್ಳಬೇಕಾದ ಆತ್ಮೀಕ ಗೋಲ (2:6, 7).
ಆತನ ಸಂಪೂರ್ಣ ದೈವತ್ವ (2:9).
ಆತನು ಕ್ರೈಸ್ತರನ್ನು ಪರಿಪೂರ್ಣ ಮಾಡುವಿಕೆ (2:10).
ಆತನು ದೀಕ್ಷಾಸ್ನಾನದಲ್ಲಿ ಒದಗಿಸುವ ಆತ್ಮೀಕ ಸುನ್ನತಿ (2:11).

ಪೌಲನು ತನ್ನ ಇತರ ಬರಹಗಳಲ್ಲಿ, ಯೇಸುವಿನೊಂದಿಗಿನ ತಮ್ಮ ಸಂಬಂಧದ ಕಾರಣದಿಂದ ಆತನ ಆತ್ಮೀಕ ಹಿಂಬಾಲಕರಾಗಿರುವವರನ್ನು ಬಣ್ಣಿಸುವದಕ್ಕೆ "ಕ್ರಿಸ್ತನಲ್ಲಿ" ಮತ್ತು "ಆತನಲ್ಲಿ" ಎಂಬ ಪದಗಳನ್ನು ಬಳಸಿದನು. ಇವರು "ಕ್ರಿಸ್ತನಲ್ಲಿ" ಇದ್ದ ಅಥವಾ "ಕರ್ತನಲ್ಲಿ" ಇದ್ದ ವಿವಿಧ ಸಭೆಗಳ ಸದಸ್ಯರಾಗಿದ್ದರು ಅಥವಾ ಕ್ರೈಸ್ತರಾಗಿದ್ದರು.[10]

ಸಕಲ ಆತ್ಮೀಕ ಆಶೀರ್ವಾದ "ಕ್ರಿಸ್ತನಲ್ಲಿ" ಇದೆ (ಎಫೆಸ 1:3). ಈ ಆಶೀರ್ವಾದಗಳಲ್ಲಿ ಈ ಕೆಳಗಿನವುಗಳು ಸೇರಿರುತ್ತವೆ:

ವಿಮೋಚನೆ (ರೋಮಾ 3:24; ಎಫೆಸ 1:7)
ಕ್ಷಮಾಪಣೆ (ಎಫೆಸ 1:7; ಕೊಲೊಸ್ಸೆ 1:14)
ನಿತ್ಯಜೀವ (ರೋಮಾ 6:23; 2 ತಿಮೊಥೆ 1:1; 1 ಯೋಹಾನ 5:11)
ಶುದ್ಧೀಕರಣ (1 ಕೊರಿಂಥ 1:2)
ಕೃಪೆ (1 ಕೊರಿಂಥ 1:4; 2 ತಿಮೊಥೆ 1:9; 2:1)
ಒಂದು ಹೊಸ ಸೃಷ್ಟಿಯಾಗಿರುವದು (2 ಕೊರಿಂಥ 5:17)
ಸಂಧಾನಗೊಳ್ಳುವಿಕೆ (2 ಕೊರಿಂಥ 5:19)
ನೀತಿವಂತರಾಗಿ ಮಾಡಲ್ಪಡುವದು (2 ಕೊರಿಂಥ 5:21)
ದೇವರಿಗೆ ಸಮೀಪಸ್ಥರಾಗಿ ತರಲ್ಪಡುವದು (ಎಫೆಸ 2:13)
ರಕ್ಷಣೆ (2 ತಿಮೊಥೆ 2:10)

ನಾವು ಹೇಗೆ "ಕ್ರಿಸ್ತನಲ್ಲಿ" ಇರಬಲ್ಲೆವು? "ಕ್ರಿಸ್ತನಲ್ಲಿ" ಇರುವ ವ್ಯಕ್ತಿಯು ಆತನ ಸಕಲ ಆತ್ಮೀಕ ಆಶೀರ್ವಾದಗಳನ್ನು ಆನಂದಿಸಬಹುದು. ಇದು ಸತ್ಯವಾದದ್ದರಿಂದ, ಎರಡು ಪ್ರಾಮುಖ್ಯವಾದ ಪ್ರಶ್ನೆಗಳಿಗೆ ಉತ್ತರಿಸುವ ಅಗತ್ಯವಿದೆ. ಮೊದಲನೆಯದ್ದು, "ಒಬ್ಬ ವ್ಯಕ್ತಿಯು ಹೇಗೆ ಕ್ರಿಸ್ತನನ್ನು ಸೇರಿಕೊಳ್ಳುತ್ತಾನೆ?" ಪೌಲನ ಉತ್ತರವೇನೆಂದರೆ "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ರೋಮಾ 6:3); "ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:27). ದೀಕ್ಷಾಸ್ನಾನ ಮಾಡಿಸಿಕೊಂಡವರು ಮೊದಲು ಸುವಾರ್ತೆಯನ್ನು ಕೇಳತಕ್ಕದ್ದು (ಯೋಹಾನ 6:45), ನಂಬಬೇಕು (ಮಾರ್ಕ 16:15, 16), ಪಶ್ಚಾತ್ತಾಪ ಪಡಬೇಕು (ಅಪೊಸ್ತಲರ ಕೃತ್ಯಗಳು 2:38), ಮತ್ತು ಯೇಸುವನ್ನು ಕರ್ತನೆಂದು ಅರಿಕೆ ಮಾಡಬೇಕು (ಅಪೊಸ್ತಲರ ಕೃತ್ಯಗಳು 8:37; ರೋಮಾ 10:9, 10). ಎರಡನೆಯ ಪ್ರಶ್ನೆಯು "ದೀಕ್ಷಾಸ್ನಾನ ಮಾಡಿಸಿಕೊಂಡಿರುವಂಥ ವ್ಯಕ್ತಿಯು ತಾನು ಇನ್ನೂ ಕ್ರಿಸ್ತನಲ್ಲಿ

ಇದ್ದಾನೆಂಬುದನ್ನು ಹೇಗೆ ತಿಳಿದುಕೊಳ್ಳಬಲ್ಲನು?" ಯೋಹಾನನ ಬರಹಗಳು ಉತ್ತರವನ್ನು ಒದಗಿಸುತ್ತವೆ: "ಯಾವನಾದರು ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ" (1 ಯೋಹಾನ 2:5); "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ" (1 ಯೋಹಾನ 3:24).

## ಅನ್ವಯಿಸುವಿಕೆ

### ಅಪೊಸ್ತಲರು, ಯೇಸುವಿನ ಆರಿಸಿಕೊಳ್ಳಲ್ಪಟ್ಟಿರುವ ಸಂದೇಶಕರು (1:1)

ಪೌಲನು ಕೊಲೊಸ್ಸೆಯವರಿಗೆ ತನ್ನ ಪತ್ರಿಕೆಯನ್ನು ತಾನು ಯೇಸು ಕ್ರಿಸ್ತನ ಅಪೊಸ್ತಲನೆಂಬದಾಗಿ ಭರವಸೆ ಕೊಡುವ ಮೂಲಕ ಆರಂಭಿಸುತ್ತಾನೆ. ಯೇಸು ಕೆಲವರನ್ನು ಅಪೊಸ್ತಲರನ್ನಾಗಿ ಕೊಟ್ಟನು (ಎಫೆಸ 4:11), ಆದರೆ ಎಲ್ಲರೂ ಅಪೊಸ್ತಲರಾಗಿರುವದಿಲ್ಲ (1 ಕೊರಿಂಥ 12:28, 29). ಈ ವ್ಯಕ್ತಿಗಳಿಗೆ ಸಭೆಯಲ್ಲಿ ಒಂದು ವಿಶೇಷ ಸ್ಥಾನವಿತ್ತು.

1. ಅಪೊಸ್ತಲರು ಸತ್ಯದ ಭಂಡಾರವಾಗಿದ್ದರು. ಅಪೊಸ್ತಲರು ಆದಿ ಸಭೆಗೆ ಪ್ರಾಮುಖ್ಯವಾಗಿದ್ದದ್ದು ಮಾತ್ರವಲ್ಲದೆ, ಯೇಸು ಅವರಿಗೆ ನೀಡಿದ್ದ ವಿಶೇಷ ಉಪದೇಶ ಮತ್ತು ಅಧಿಕಾರದ ಕಾರಣದಿಂದ ಅವರು ನಮಗೆ ಸಹ ಪ್ರಾಮುಖ್ಯರಾಗಿರುತ್ತಾರೆ. ಆತನು ಅಪೊಸ್ತಲರಿಗೆ ಉಪದೇಶ, ತರಬೇತಿ ಕೊಡುವ ಮೂಲಕ, ಮತ್ತು ಬೋಧಿಸುವದಕ್ಕಾಗಿ ಅವರನ್ನು ಕಳುಹಿಸುವ ಮೂಲಕ ಅವರನ್ನು ಸನ್ನದ್ಧುಗೊಳಿಸಿದನು (ಮಾರ್ಕ 3:14).

2. ಸಭೆಯು ಅಪೊಸ್ತಲರ ಮೇಲೆ ಕಟ್ಟಲ್ಪಡತಕ್ಕದ್ದು, ಯಾಕೆಂದರೆ ಅವರು ಅಸ್ತಿವಾರದಲ್ಲಿದ್ದಾರೆ (ಎಫೆಸ 2:20). ಅವರು ತಮ್ಮ ಉಪದೇಶಗಳನ್ನು ಪವಿತ್ರಾತ್ಮನಿಂದ ಪಡೆದುಕೊಂಡರು (ಎಫೆಸ 3:5). ಬೇರೆ ಯಾವನಾದರೂ ಬೇರೊಂದು ಸಂದೇಶವನ್ನು ಕಲಿಸಿದರೆ, ಅವನ ಮೇಲೆ ಪರಲೋಕದಿಂದ ಶಾಪವು ನೆಲೆಗೊಳ್ಳುವದು (ಗಲಾತ್ಯ 1:8, 9).

3. ಅಪೊಸ್ತಲರ ಉಪದೇಶಗಳು ಇಂದು ನಮಗೋಸ್ಕರವಾಗಿರುತ್ತವೆ. ಯೇಸು ಅಪೊಸ್ತಲರಿಗೆ ನೀಡಿದ ಆದೇಶದಲ್ಲಿ ಅವರ ಕೆಲಸ ಏನೆಂಬುದನ್ನು ವಿವರಿಸಿದನು (ಮತ್ತಾಯ 28:19, 20):

ಅವರು ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕಿತ್ತು.
ಆತನು ಆಜ್ಞಾಪಿಸಿದ್ದನ್ನೆಲ್ಲಾ ಅನುಸರಿಸುವಂತೆ ಅವರು ಜನರಿಗೆ ಉಪದೇಶಿಸಬೇಕಿತ್ತು.
ಆತನ ಉಪದೇಶಗಳು ಮತ್ತು ಆಜ್ಞೆಗಳು ಕ್ರೈಸ್ತ ಯುಗದ ಸಮಾಪ್ತಿಯ ತನಕವೂ ಎಲ್ಲಾ ದೇಶಗಳಿಗೋಸ್ಕರವಾಗಿರುತ್ತವೆ.

ಅಪೊಸ್ತಲರು ತಮಗೆ ದೊರೆತ ಸಂದೇಶವನ್ನು ಸಂರಕ್ಷಿಸಿಡುವದಕ್ಕೋಸ್ಕರ, ತಮ್ಮ ಮರಣದ ನಂತರ ತಮಗೆ ಏನು ಪ್ರಕಟಿಸಲ್ಪಟ್ಟಿತ್ತೆಂಬುದು ಜನರಿಗೆ ತಿಳಿಯಲಿ ಎಂಬುದಕ್ಕೋಸ್ಕರವೇ ಬರೆದಿಟ್ಟರು (2 ಪೇತ್ರ 1:15; 3:1, 2). ಅವರು ಬರೆದಿರುವದನ್ನು "ಕರ್ತನ ಆಜ್ಞೆಗಳೇ" ಎಂದು ಸ್ವೀಕರಿಸಕೊಳ್ಳತಕ್ಕದ್ದು (1 ಕೊರಿಂಥ 14:37). ಕ್ರೈಸ್ತರಾಗಿ

ಅಪೊಸ್ತಲರಿಂದ ಹಾಕಲ್ಪಟ್ಟ ಕ್ರಿಸ್ತನ ಅಸ್ತಿವಾರದ ಮೇಲೆ ಹೇಗೆ ಕಟ್ಟುತ್ತೇವೆಂಬುದರ ಬಗ್ಗೆ ಜಾಗ್ರತೆಯಿಂದಿರಬೇಕು (1 ಕೊರಿಂಥ 3:10).

ಅಪೊಸ್ತಲರಿಗೆ ಸಕಲ ಸತ್ಯವು ಕೊಡಲ್ಪಟ್ಟಿತ್ತು. ಅವರು ಈ ಸತ್ಯವನ್ನು ಎಲ್ಲಾ ದೇಶಗಳಿಗೆ ಸಾರಬೇಕಿತ್ತು. ಇಂದು ಸಭೆಯು ಅಪೊಸ್ತಲರು ಏನು ಉಪದೇಶಿಸಿದರೋ ಅದಕ್ಕೆ ತನ್ನ ಉಪದೇಶಗಳನ್ನು ಸಿಮೀತಗೊಳಿಸಿಕೊಳ್ಳತಕ್ಕದ್ದು. ಹೊಸ ಒಡಂಬಡಿಕೆಯ ಅಡಿಯಲ್ಲಿರುವ ಅಪೊಸ್ತಲರು ಮತ್ತು ಪ್ರವಾದಿಗಳು ಅಸ್ತಿವಾರವಾಗಿದ್ದು ಅದರ ಮೇಲೆ ಎಲ್ಲಾ ಕ್ರೈಸ್ತರು ಕಟ್ಟಲ್ಪಡತಕ್ಕದ್ದು (ಎಫೆಸ 2:20).

## ತಿಮೊಥೆಯನ ರೀತಿಯ ಒಬ್ಬ ಬೋಧಕ (1:1)

ತಿಮೊಥೆಯು ಒಬ್ಬ ಕ್ರೈಸ್ತ ಸಹೋದರನು ಮತ್ತು ಪೌಲ ಹಾಗೂ ಅಪೊಲ್ಲೋಸರು ಕ್ರಿಸ್ತನಿಗೋಸ್ಕರ ಜೊತೆ ಕೆಲಸದವರಾಗಿದ್ದ ಪ್ರಕಾರವೇ ಈತನು ಸಹ ಒಬ್ಬ ಜೊತೆ ಕೆಲಸದವನಾಗಿದ್ದನು (1 ಕೊರಿಂಥ 3:3, 4) ಮತ್ತು ಎಲ್ಲಾ ಕ್ರೈಸ್ತರು ಸಹ ಅದೇ ರೀತಿ ಇರತಕ್ಕದ್ದು. ತಿಮೊಥೆಯನಿಗೆ ಒಬ್ಬ ಅಪೊಸ್ತಲನ ಅಧಿಕಾರ ಹಾಗೂ ಅದ್ಭುತಗಳನ್ನು ಮಾಡುವ ವರ ಇರಲಿಲ್ಲ. ಪೌಲನ ಕೊಲೊಸ್ಸೆಯವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ವಂದನೆ ಹೇಳುವ ವೇಳೆ ತಿಮೊಥೆಯನನ್ನು ಸೇರ್ಪಡೆಗೊಳಿಸುವ ಮೂಲಕ ಆತನು ಒಬ್ಬ ಜೊತೆ ಕೆಲಸದವನು ಎಂಬುದಕ್ಕೆ ತನ್ನ ಅನುಮೋದನೆಯನ್ನು ತೋರ್ಪಡಿಸಿದನು. ಇಂದು ಬೋಧಕರು ತಿಮೊಥೆಯನ ವರ್ಗದಲ್ಲಿಯೇ ಸೇರಿದವರಾಗಿದ್ದಾರೆ, ಯಾಕೆಂದರೆ ಅವರು ಹೊಸ ಒಡಂಬಡಿಕೆಯನ್ನು ಬರೆದ ಪ್ರೇರಿತ ವ್ಯಕ್ತಿಗಳಿಂದ ತಮ್ಮ ಉಪದೇಶಗಳನ್ನು ಕಲಿತುಕೊಳ್ಳುವವರಾಗಿದ್ದಾರೆ.

1. *ತಿಮೊಥೆಯನ ಹಾಗೆಯೇ,* ನಾವು ಅಪೊಸ್ತಲರಿಂದ ಉಪದೇಶಗಳನ್ನು ಪಡೆದುಕೊಳ್ಳುತ್ತೇವೆ. ಪೌಲನಿಗೆ ಆತನ ಉಪದೇಶಗಳು ಪವಿತ್ರಾತ್ಮನ ಮುಖಾಂತರ ಯೇಸುವಿನಿಂದ ಕೊಡಲ್ಪಟ್ಟಿದ್ದವು (ಗಲಾತ್ಯ 1:11, 12; ಎಫೆಸ 3:5). ತಿಮೊಥೆಯನು ತಾನು ಬೋಧಿಸಲಿದ್ದ ಉಪದೇಶಗಳನ್ನು ಪೌಲನಿಂದ ಕಲಿತುಕೊಂಡನು (2 ತಿಮೊಥೆ 2:2). ನಾವು ಸಹ ಹೊಸ ಒಡಂಬಡಿಕೆಯ ಮಧ್ಯಸ್ಥನಾದ – ಮತ್ತು ಹೊಸ ಒಡಂಬಡಿಕೆಯ ಉಪದೇಶದ ಸ್ಥಾಪಕನಾದ (ಇಬ್ರಿಯ 2:10; 12:2, 24) ಯೇಸುವಿನ ಉಪದೇಶಗಳನ್ನು ಕಲಿತುಕೊಳ್ಳುವದಕ್ಕೋಸ್ಕರ ಅಪೊಸ್ತಲರು ಮತ್ತು ಹೊಸ ಒಡಂಬಡಿಕೆಯ ಇತರ ಪ್ರೇರಿತ ಲೇಖಕರ ಕಡೆಗೆ ನೋಡುವವರಾಗಿರಬೇಕು. ಕ್ರೈಸ್ತ ಯುಗದಲ್ಲಿ ಆತನು ನಮಗೆ ದೇವರ ಪ್ರಕಟನೆಯ ದಾರಿಯಾಗಿರುತ್ತಾನೆ (ಇಬ್ರಿಯ 1:1, 2).

2. *ತಿಮೊಥೆಯನ ಹಾಗೆಯೇ,* ನಾವು ಇತರರಿಗೆ ಏನು ಕಲಿಸುತ್ತೇವೆಂಬ ವಿಷಯದಲ್ಲಿ ಜಾಗರೂಕರಾಗಿರಬೇಕು. ಯೇಸು ಮತ್ತು ಅಪೊಸ್ತಲರು ತಮ್ಮ ಬೋಧನೆಯ ವಿಷಯದಲ್ಲಿ ತೆಗೆದುಕೊಂಡ ಅದೇ ಜಾಗ್ರತೆಯನ್ನೇ ಪೌಲನ ಜೊತೆ ಸೇವಕರು ತೆಗೆದುಕೊಳ್ಳಬೇಕಿತ್ತು. ತಾನು ತಿಮೊಥೆಯನನ್ನು ಎಫೆಸದಲ್ಲಿ ಕೆಲವರಿಗೆ “ಬೇರೆ ಉಪದೇಶ” ಮಾಡಬಾರದೆಂದು ಸೂಚಿಸುವದಕ್ಕಾಗಿ ಬಿಟ್ಟು ಬಂದಿದ್ದನೆಂಬದಾಗಿ ಪೌಲನು ಆತನಿಗೆ ಹೇಳುತ್ತಾನೆ (1 ತಿಮೊಥೆ 1:3). ಯಾಕೋಬನು ಹೀಗೆ ಬರೆಯುತ್ತಾನೆ, “ನನ್ನ ಸಹೋದರರೇ, ಬೋಧಕರಾದ ನಮಗೆ ಕಠಿಣವಾದ ತೀರ್ಪು ಆಗುವದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ” (ಯಾಕೋಬ 3:1). ನ್ಯಾಯತೀರ್ಪಿನ ದಿನದಂದು, ಕೆಲವರು ಯೇಸುವಿನ ಹೆಸರಿನಲ್ಲಿ

ಪ್ರವಾದನೆಗಳನ್ನು ಪ್ರವಾದಿಸುತ್ತಿದ್ದಾಗ್ಯೂ ಯೇಸು ಅವರಿಗೆ ತನ್ನನ್ನು ಬಿಟ್ಟು ತೊಲಗಿ ಹೋಗುವಂತೆ ಹೇಳುವನು (ಮತ್ತಾಯ 7:22, 23).

ಯೇಸು ತನಗೆ ತಂದೆಯಿಂದ ಕೊಡಲ್ಪಟ್ಟ ಸಂದೇಶವನ್ನು ಮಾತ್ರವೇ ಬೋಧಿಸುವದಕ್ಕೆ ಜಾಗ್ರತೆ ವಹಿಸಿದ್ದನು (ಯೋಹಾನ 7:16; 8:26; 14:10, 24). ಆತನು ತನ್ನಷ್ಟಕ್ಕೆ ತಾನೇ ನಡೆಯಲಿಲ್ಲ ಅಥವಾ ಮಾತಾಡಲಿಲ್ಲ; ಆತನು ತಂದೆಯಿಂದ ತನಗೆ ಕೊಡಲ್ಪಟ್ಟ ಮಾತುಗಳನ್ನಷ್ಟೇ ಆಡಿದನು. ಪವಿತ್ರಾತ್ಮನು ಸಹ, ತಾನು ಯೇಸುವಿನಿಂದ ಸ್ವೀಕರಿಸಿದ ಸಂದೇಶವನ್ನು ಮಾತ್ರವೇ ಬೋಧಿಸುವದರಲ್ಲಿ ಜಾಗ್ರತೆ ವಹಿಸಿದ್ದನು. ಯೇಸು ಆತನ ವಿಷಯವಾಗಿ ಹೀಗೆ ಹೇಳಿಕೊಂಡನು, “ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು” (ಯೋಹಾನ 16:13b).

ಅದೇ ರೀತಿಯಲ್ಲಿಯೇ ಅಪೊಸ್ತಲರು ಸಹ ತಮಗೆ ಕೊಡಲ್ಪಟ್ಟಿದ್ದ ಸತ್ಯಗಳನ್ನಷ್ಟೆ ಇತತರಿಗೆ ಬೋಧಿಸುವದರಲ್ಲಿ ಎಚ್ಚರಿಕೆಯಿಂದಿದ್ದರು. ಪೌಲನು ಹೀಗೆ ಬರೆಯುತ್ತಾನೆ, “ನಾಚಿಕೆಯನ್ನು ಹುಟ್ಟಿಸುವ ಗುಪ್ತ ಕಾರ್ಯಗಳನ್ನು ನಾವು ಬಿಟ್ಟುಬಿಟ್ಟು ತಂತ್ರದಲ್ಲಿ ನಡೆಯದೆ ದೇವರ ವಾಕ್ಯವನ್ನು ಕೆಡಿಸದೆ ಸತ್ಯವನ್ನು ಪರಿಷ್ಕಾರವಾಗಿ ಬೋಧಿಸುತ್ತಾ ನಾವು ಸಜ್ಜನರೆಂದು ಪ್ರತಿಮನುಷ್ಯನ ಮನಸ್ಸು ದೇವರ ಮುಂದೆ ಒಪ್ಪಬೇಕಾದ ರೀತಿಯಲ್ಲಿ ನಡೆಯುತ್ತೇವೆ” (2 ಕೊರಿಂಥ 4:2).

ಯೇಸು ಪವಿತ್ರಾತ್ಮನ ಮುಖಾಂತರ ಅಪೊಸ್ತಲರಿಗೆ ಕೊಟ್ಟ ಸಂದೇಶವು ಸರಿಯಾಗಿ ತಂದೆಯು ನಮಗೆ ಪ್ರಕಟಗೊಳಿಸಲಿಚ್ಛಿಸುವ ಸಂದೇಶವೇ ಆಗಿತ್ತು. ಈಗ ನಮ್ಮ ಬಳಿಯಲ್ಲಿ ಅಪೊಸ್ತಲರ ಮೂಲಕ ಅಷ್ಟೊಂದು ಜಾಗರೂಕತೆಯಿಂದ ಪ್ರಕಟಗೊಳಿಸಲ್ಪಟ್ಟಿರುವ ಸಂದೇಶ ಇರುವದರಿಂದ, ಅದೇ ಕಾಳಜಿಯನ್ನು ತೋರಿಸಬೇಕು ಮತ್ತು ಅವರು ನಮಗೆ ಶಾಸ್ತ್ರಗಳ ಮೂಲಕ ಕೊಟ್ಟದ್ದನ್ನು ಬದಲಾಯಿಸದಂತೆ ಜಾಗ್ರತೆಯಿಂದಿರಬೇಕು. ದೇವರ ವಾಕ್ಯವನ್ನು ತಿರುಚುವವರು ತಮ್ಮ ನಾಶನವನ್ನು ತಾವೇ ಬರಮಾಡಿಕೊಳ್ಳುತ್ತಾರೆ (2 ಪೇತ್ರ 3:15, 16).

## ನಂಬಿಗಸ್ತರಾದ ಸಹೋದರರು (1:2)

ಪೌಲನು ಕೊಲೊಸ್ಸೆಯವರನ್ನು ಕರ್ತನಿಗೆ ನಂಬಿಗಸ್ತರಾದವರೆಂದು ಪರಿಗಣಿಸಿದನು (1:2). ಅವರಿಗೆ ಸುಳ್ಳು ಬೋಧನೆಗಳ ಬಗ್ಗೆ ಎಚ್ಚರಿಕೆಯನ್ನು ಕೊಡುವದಕ್ಕೋಸ್ಕರ ಈ ಪತ್ರಿಕೆಯನ್ನು ಬರೆದನು (2:8-23). ಬೋಧಕರು ತಾವು ಏನು ಕಲಿಸುತ್ತೇವೆಂಬ ವಿಚಾರದಲ್ಲಿ ಎಚ್ಚರಿಕೆಯಿಂದಿರುವದಷ್ಟೆ ಅಲ್ಲ, ಆದರೆ ಎಲ್ಲಾ ಕ್ರೈಸ್ತರು ಸಹ ತಾವು ಬೋಧಕರಿಂದ ಏನು ಕೇಳುತ್ತಾರೆ ಮತ್ತು ಅಂಗೀಕರಿಸಿಕೊಳ್ಳುತ್ತಾರೆ ಎಂಬ ವಿಷಯದಲ್ಲಿ ಎಚ್ಚರಿಕೆಯಿಂದ ಇರತಕ್ಕದ್ದು.

ಮೋಸಕರ ಬೋಧನೆಗಳು ನಮ್ಮನ್ನು ಅಪನಂಬಿಗಸ್ತರಾಗುವಂತೆ ಮಾಡಬಲ್ಲವು. 2 ಥೆಸಲೋನಿಕ 2:10-12ರಲ್ಲಿ, ಮೋಸಕರವಾದ ಸುಳ್ಳುಗಳನ್ನು ಅವರು ನಂಬುವದಾದರೆ ಅವುಗಳಿಂದಾಗುವ ಹಾನಿಯ ಬಗ್ಗೆ ಪೌಲನು ಬರೆಯುತ್ತಾನೆ. ಸುಳ್ಳು ಬೋಧನೆಗಳು ಅವುಗಳಿಂದ ಮೋಸ ಹೋಗದಿರುವ ಕ್ರೈಸ್ತರಿಗೆ ಹಾನಿಯನ್ನುಂಟು ಮಾಡುವದಿಲ್ಲ. ದಾರಿ ತಪ್ಪಿಸಲ್ಪಡುವದರಿಂದ ದೂರವಿರುವದಕ್ಕಾಗಿ, ಕ್ರೈಸ್ತರು ಸತ್ಯವನ್ನು ಪ್ರೀತಿಸತಕ್ಕದ್ದು (2 ಥೆಸಲೋನಿಕ 2:10), ಆ ಸತ್ಯವನ್ನು ಯೇಸುವಿನ ಬೋಧನೆಗಳಲ್ಲಿ ನೆಲೆಗೊಳ್ಳುವ ಮೂಲಕ ಕಲಿತುಕೊಳ್ಳಬಹುದಾಗಿದೆ (ಯೋಹಾನ 8:31, 32). ಸತ್ಯವು ಯೇಸುವಿನಲ್ಲಿ

ಸಿಕ್ಕುತ್ತದೆ (ಯೋಹಾನ 1:14, 17; ಎಫೆಸ 4:21).

ಪೇತ್ರನು “ನಾಶಕರ ಮತಭೇದಗಳನ್ನು (ಪಾಷಂಡಮತಗಳನ್ನು)” ಬೋಧಿಸುವವರೆಂದು ಎಚ್ಚರಿಸಿದನು (2 ಪೇತ್ರ 2:1). ಎಫೆಸದ ಹಿರಿಯರಿಗೆ ಸಲಹಾಸೂಚನೆಗಳನ್ನು ನೀಡುವ ವೇಳೆ, ಅವರಲ್ಲಿ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡುವರು ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 20:29-31). ಕ್ರೈಸ್ತರು ದಾರಿ ತಪ್ಪಿಸಲ್ಪಡದಂತಿರುವದಕ್ಕೆ ಎಲ್ಲಾ ಬೋಧನೆಗಳನ್ನು ಪರೀಕ್ಷಿಸತಕ್ಕದ್ದು (1 ಯೋಹಾನ 4:1).

ಹಳೆಯ ಒಡಂಬಡಿಕೆಯಲ್ಲಿನ ದುಃಖಕರ ಘಟನೆಗಳಲ್ಲೊಂದೆಂದರೆ ಯೆಹೂದದ ಒಬ್ಬ ಯುವ ಪ್ರವಾದಿಯು ಇಸ್ರಾಯೇಲಿನ ಅರಸನಾದ ಯಾರೊಬ್ಬಾಮನಿಗೆ ಸಂದೇಶವೊಂದನ್ನು ಕೊಡಬೇಕೆಂದು ದೇವರಿಂದ ಕಳುಹಿಸಲ್ಪಟ್ಟನು (1 ಅರಸು 13:1-25). ದೇವರು ಆತನಿಗೆ ಸಂದೇಶವನ್ನು ಕೊಟ್ಟ ಸ್ಥಳದಲ್ಲಿ ಅನ್ನಪಾನಗಳನ್ನು ಮಾಡಬಾರದು ಮತ್ತು ಅಲ್ಲಿಗೆ ಹೋದ ದಾರಿಯನ್ನು ಬಿಟ್ಟು ಬೇರೊಂದು ದಾರಿಯಲ್ಲಿ ಹಿಂದಿರುಗಬೇಕೆಂದು ಹೇಳಿದನು.

ಆತನು ಯಾರೊಬ್ಬಾಮನಿಗೆ ಸಂದೇಶವನ್ನು ಕೊಟ್ಟನು, ಯಾರೊಬ್ಬಾಮನು ಆತನಿಗೆ ಇದ್ದು ಊಟ ಮಾಡಿ ಬಲಹೊಂದಿ ಬಹುಮಾನವನ್ನು ಪಡೆದುಕೊಂಡು ಹೋಗುವಂತೆ ಹೇಳಿದನು. ಕರ್ತನು ಅದನ್ನು ನಿಷೇಧಿಸಿದ್ದಾನೆಂಬುದು ಆತನ ಪ್ರತ್ಯುತ್ತರವಾಗಿತ್ತು.

ಒಬ್ಬ ಮುದುಕನಾದ ಪ್ರವಾದಿಯು ಈ ಸಂದೇಶದ ಕುರಿತಾಗಿ ಕೇಳಿದನು. ಆತನು ಆ ಯುವ ಪ್ರವಾದಿಯನ್ನು ಹಿಂಬಾಲಿಸಿಕೊಂಡು ಹೋಗಿ, “ನಾನೂ ನಿನ್ನಂತೆ ಪ್ರವಾದಿಯಾಗಿದ್ದೇನೆ’ ಒಬ್ಬ ದೇವದೂತನು ನನಗೆ ಕಾಣಿಸಿಕೊಂಡು ನಿನ್ನನ್ನು ಕರಕೊಂಡು ಬರಬೇಕೆಂದೂ ನಿನಗೆ ಅನ್ನಪಾನಗಳನ್ನು ಕೊಡಬೇಕೆಂದೂ ಯೆಹೋವನ ಹೆಸರಿನಲ್ಲಿ ಆಜ್ಞಾಪಿಸಿದ್ದಾನೆ ಎಂದು ಹೇಳಿದನು; ಆದರೆ ಈ ಮಾತು ಸುಳ್ಳು” (1 ಅರಸು 13:18).

ಯುವ ಪ್ರವಾದಿಯು ಸುಳ್ಳೊಂದನ್ನು ನಂಬಿದ್ದರ ಫಲಿತವು ದುರಂತಕರವಾಗಿತ್ತು. ಆತನು ತನ್ನ ಮನೆಯ ಕಡೆಗೆ ಪ್ರಯಾಣವನ್ನು ಆರಂಭಿಸಿದಾಗ, ಒಂದು ಸಿಂಹವು ಆತನನ್ನು ಕೊಂದು ಹಾಕಿತು. ಆತನು ತನಗೆ ದೇವರು ಕೊಟ್ಟಿದ್ದ ಸಂದೇಶವನ್ನು ಮಾತ್ರವೇ ನಂಬಬೇಕೆಂದು, ಬೇರೆ ಯಾವದೇ ಮಾತನ್ನು, ಅದು ದೇವದೂತನಿಂದ ಕೊಡಲ್ಪಟ್ಟದ್ದೆಂದು ಹೇಳಲ್ಪಟ್ಟಾಗ್ಯೂ ನಂಬಬಾರದೆಂದು ಅಪೇಕ್ಷಿಸಲಾಗಿತ್ತು.

ಯೇಸುವು ಹೊಸ ಒಡಂಬಡಿಕೆಯಲ್ಲಿ ಪ್ರಕಟಗೊಳಿಸಿರುವದನ್ನು ಮಾತ್ರವೇ ಅನುಸರಿಸುವದರಲ್ಲಿ ಪ್ರತಿಯೊಬ್ಬ ಕ್ರೈಸ್ತನು ಜಾಗರೂಕನಾಗಿರಬೇಕು. ಅದರ ಬೋಧನೆಗಳಿಗೆ ವಿರುದ್ಧವಾಗಿ ಜೀವಿಸುವದರ ಫಲಿತವು ರಕ್ಷಣೆಗೆ ಬದಲಾಗಿ ಅಪರಾಧ ನಿರ್ಣಯ ಆಗುವದು. ಹೊಸ ಒಡಂಬಡಿಕೆಯ ಪ್ರೇರಿತ ಲೇಖಕರ ಮೂಲಕ ಯೇಸುವು ಕಲಿಸಿ ಕೊಟ್ಟಿರುವದಕ್ಕೆ ಮಾತ್ರವೇ ಕ್ರೈಸ್ತರು ವಿಧೇಯರಾಗತಕ್ಕದ್ದು. ಎಲ್ಲಾ ಕ್ರೈಸ್ತರು “ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ . . . ನಿರತರಾಗಿ” ಇರುವ ಮೂಲಕ ಆದಿ ಸಭೆಯ ಮಾದರಿಯನ್ನು ಅನುಸರಿಸಬೇಕು (ಅಪೊಸ್ತಲರ ಕೃತ್ಯಗಳು 2:42).

## ಅಡಿಟಿಪ್ಪಣಿಗಳು

[1]H. C. G. Moule, *The Epistles to the Colossians and to Philemon*, The Cambridge Bible for Schools and Colleges (Cambridge: University Press, 1893; reprint, 1902), 63. [2]E. E. Ellis, "Paul," in *New Bible Dictionary*, 2d ed., ed. J. D. Douglas, rev. Hillyer (Wheaton, Ill.: Tyndale House Publishing, 1982), 891. [3]Thomas W. Martin, "Nicopolis," in *The Anchor Bible Dictionary*, ed. David Noel Freeman (New York: Doubleday, 1992), 4:1108. [4]D. Edmond Hiebert, "Paul," in *The New International Dictionary of the Bible*, ed. Merrill C. Tenny, rev. J. D. Douglas (Grand Rapids, Mich.: Regency Reference Library, Zondervan Publishing House, 1987), 760. [5]Herbert M. Carson, *The Epistles of Paul to the Colossians and Philemon: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 26. [6]Donald Guthrie, "Timothy," in *New Bible Dictionary*, 2d ed., ed. J. D. Douglas, rev. N. Hillyer (Wheaton, Ill.: Tyndale House Publishing, 1982), 1201. [7]Donald Stamps, ed., *The Full Life Study Bible* (Grand Rapids, Mich.: Zondervan Publishing Co., 1992), 1677. [8]Robert G. Bratcher and Eugene A. Nida, *A Translators Handbook on Paul's Letters to the Colossians and to Philemon*, Helps for Translators (New York: United Bible Societies, 1977), 4. [9]Frederick Dale Bruner, *Theology of the Holy Spirit: The Pentecostal Experience and the New Testament Witness* (Grand Rapids, Mich.: Wm. B. Eerdmans Publishing Co., 1970; reprint, 1986), 257–58. [10]ರೋಮಾ 12:5; 16:3, 7, 9, 10; 1 ಕೊರಿಂಥ 3:1; 4:10; 2 ಕೊರಿಂಥ 1:21; ಗಲಾತ್ಯ 1:22; 3:28; ಎಫೆಸ 1:1, 3, 4; ಫಿಲಿ 4:1, 2, 21; 1 ಥೆಸಲೋನಿಕ 2:14; 3:8.